ಕೊರವಂಜಿ



ಏಪ್ರಿಲ್ ೧೯೪೭

★

ಸಂಪಾದಕರು:
ಶ್ರೀ. ರಾ. ಶಿ.

ಸಲಹೆಗಾರರು.
ಶ್ರೀ. ನಾ. ಕಸ್ತೂರಿ

ಚಿತ್ರಕಾರರು:
ಶ್ರೀ. ಆರ್. ಕೆ. ಲಕ್ಷ್ಮಣ್

★

ಬಿಡಿಪತ್ರಿಕೆ
ಎರಡಾಣೆ.

ನಗೆಯ —
ಮಾಸ ಪತ್ರಿಕೆ

ಕೊ ರ ವ ಂ ಜಿ

ಕೊರವಂಜಿಯು ಪ್ರತಿ ತಿಂಗಳ ಪಾಡ್ಯವೂ ಹೊರಬೀಳುವುದು.

ತಿಳಿ ಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ಇವುಗಳಿಗೆ ಸರ್ವದಾ ಸುಸ್ವಾಗತವುಂಟು. ಆದರೆ ವ್ಯಕ್ತಿಯನ್ನು ದ್ವೇಷಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಸಂಪಾದಕೀಯ ಪತ್ರ ವ್ಯವಹಾರಗಳನ್ನು ಸಂಪಾದಕರು. ನಂ. ೧, ವೆಂಕಟರಂಗೈಯ್ಯಂಗಾರ್ ರಸ್ತೆ, ಮಲ್ಲೇಶ್ವರ, ಬೆಂಗಳೂರಿನಲ್ಲಿ ನಡೆಸಬೇಕು.

ವ್ಯವಸ್ಥಾಪಕರಲ್ಲಿ ಮಿಕ್ಕ ವಿಷಯಗಳನ್ನು ಪ್ರಸ್ತಾಪಿಸಬೇಕು.

ವ್ಯವಸ್ಥಾಪಕರು,
೨೮-ಎ, ಲಾಲ್‌ಬಾಗ್ ರೋಡ್, ಬೆಂಗಳೂರು ಸಿಟಿ.

ವಾರ್ಷಿಕ ಚಂದಾ ರೂ. 1-8 0 **ಬಿಡಿ ಪ್ರತಿ 0-2-0**

ವಿಷಯಾನುಕ್ರಮಣಿಕೆ

ಕೊರವಂಜಿ

ಸಂಪುಟ ೧] ಏಪ್ರಿಲ್ ೧೯೪೨ [ಸಂಚಿಕೆ ೨

ಕುಹ ಕಿಡಿಗಳು

ಪೌರಸಭಾ ಕಛೇರಿಯ ಹಳೆಯ ಕಾಗದಗಳ ಮಾರಾಟದಿಂದ ಮುನ್ನೂರು ರೂಪಾಯಿಗಳು ಉತ್ಪತ್ತಿಯಾಯಿತಂತೆ.

—ಪೌರ ಸಭೆಯ ಠರಾವುಗಳು ಕಡೆಗೂ ಪ್ರಯೋಜನಕಾರಿಯಾಯಿತಲ್ಲ.

* * *

ಪ್ರಮುಖ ಶಾಲೆಯಲ್ಲಿ ವಿದ್ಯಾರ್ಥಿಯೊಬ್ಬನು ಆಕಳಿಸ ಹೋದಾಗ ದವಡೆಯು ಸಡಿಲಿತಂತೆ.

—ದಯಾಮಯರು ಉಪಾಧ್ಯಾಯರ ಹೆಸರನ್ನು ಬಹಿರಂಗಪಡಿಸಿಲ್ಲ.

* * *

ಆಸ್ಪತ್ರೆಯ ಅಧಿಕಾರಿಗಳೊಬ್ಬರು "ನಮಗೆ ಈ ವರ್ಷ ನಾಲ್ಕು ಜನರಿಂದ ಮಾತ್ರ ದೂರುವ ಅರ್ಜಿಗಳು ಬಂದಿವೆ" ಎಂದು ವರದಿ ಮಾಡಿದ್ದಾರೆ.

—ಅಂದ ಮೇಲೆ ಮಿಕ್ಕವರೆಲ್ಲಾ ತಾವೇ ದೂರು ಹೇಳಲು ಹೋದವರು ಹಿಂತಿರುಗಲಿಲ್ಲವೊ?

* * *

"ಈ ಮೋಟಾರು ಕೊಂಡುಕೊಳ್ಳಿ. ಅತಿ ವೇಗವಾಗಿ ಹೋಗುವುದು ಇದನ್ನೇ ನಮ್ಮೂರಿನ ಪೋಲೀಸಿನವರು ಉಪಯೋಗಿಸುವರು" ಇತ್ಯಾದಿ ಜಾಹಿರಾತು.

—ನಮ್ಮೂರಿನ ಕಳ್ಳರು ಉಪಯೋಗಿಸುವಂತಹ ಮೋಟಾರು ಸಿಕ್ಕಿದರೆ ಹೆಚ್ಚು ಅನುಕೂಲ.

* * *

'ಭಾರತೀಯ ಸೈನ್ಯವೆಂದರೇನು' ಎಂದು ನಮ್ಮ ವಾಚಕರೊಬ್ಬರ ಪ್ರಶ್ನೆ.

—ಇದೂ ತಿಳಿಯದೇ! ಭಾರತೀಯರಿಂದ ಸಂಬಳ ತಿನ್ನುವ ಸೈನ್ಯ.

ಮದ್ರಾಸಿನಿಂದ ಹೊರ ಹೊರಟಿರುವವರೆಲ್ಲಾ ತಿರುಪತಿಗೆ ಹೋಗುತ್ತಿದ್ದಾರೆಂಬುದು ಶುದ್ಧ ಸುಳ್ಳು.

—ವೆಂಕಟರಮಣನ ಹತ್ತಿರ ಹೋಗಲು ಇನ್ನೂ ಸಾಕಷ್ಟು ಸಂಕಟ ಬಂದಿಲ್ಲವಷ್ಟೆ.

* * * *

ನಮ್ಮೂರಿನ ಕೇಂದ್ರ ಸ್ಥಾನದಲ್ಲಿ ರೇಡಿಯೋ ಯಂತ್ರವನ್ನು ಸ್ಥಾಪಿಸಿದ್ದಾರೆ.

—ಅದರ ಧ್ವನಿಯನ್ನು ಕೇಳಿದ ನಮಗೆ ಇದೇನು, ಶತ್ರು ನಿರ್ಮಾಣಕವ್ರೋ ಎಂಬ ಶಂಕೆ ಉಂಟಾಗಿದೆ.

* * *

ಕ್ರಾಸ್ ವರ್ಡ್ ಕಾಂಪಿಟಿಷನ್ನುಗಳಿಂದ ಬಹಳ ಅನಾಹುತವೆಂದು ಬಹಳ ಜನರ ಅಭಿಪ್ರಾಯ.

—ಹೌದು. ನಮ್ಮ ಸಭಾ ಸದಸ್ಯರಿಗೆ ಇವುಗಳಿಂದ ಮಧ್ಯಾಹ್ನ ನಿದ್ರೆಯೇ ತಪ್ಪಿಹೋಗಿದೆ.

* * *

ನಮ್ಮ ಸಹ ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿಗಳು.

"ಸೈನಿಕರಿಗೆ ಚಪ್ಪಲಿಗಳು ಸಾಲದು."

"ದೋಸೆಯ ಬೆಲೆಯು ಏರುತ್ತಿದೆ"

ಅಂದರೆ ದೋಸೆಯಿಂದ ಚಪ್ಪಲಿಗಳನ್ನೂ ಮಾಡುತ್ತಾರೆಯೇ?

* * *

ಗೊಬ್ಬರದ ಗಾಡಿಗಳು ನಮ್ಮೂರಿನೊಳಗೆ ಬರಬಾರದೆಂದು ಆಜ್ಞೆಯಾಗಿದೆಯಂತೆ.

—ನವೀನ ಲೇಖಕರಿಗೆ ಕಷ್ಟ. ಇನ್ನೆಲ್ಲಿ ಇವರಿಗೆ ಕಥಾವಸ್ತು ಸಿಗಬೇಕು?

* * *

ಇತ್ತೀಚೀಚೆಗೆ ಆಶ್ಚರ್ಯಕರವಾದ ಕಾದಂಬರಿಗಳು ಬಂದಿಲ್ಲವೆಂದು ವಿಮರ್ಶಕರ ಅಭಿಮತ.

—ಕಾದಂಬರಿಗಳು ಬಂದಿದ್ದೇ ಆಶ್ಚರ್ಯವಲ್ಲವೇ?

* * *

ಸಂಸಾರವು ಸುಸೂತ್ರವಾಗಿರಬೇಕಾದರೆ [illegible] ಇರಬೇಕು,ಎಂದು ಸಾಹಿತಿಗಳ ಅಭಿಪ್ರಾಯ.

—ಹೌದು. ಹೀಗೆಯೇ ಅರ್ಧ ತಲೆ ಕೆಳಗಾಗಿರಬೇಕು.

ಹುರಿಗಾಳು

"ನಾಟಕಗಳಲ್ಲಿ ಸಂಗೀತಕ್ಕೆ ಸ್ಥಾನವಿಲ್ಲ" ಎಂದು ಒಬ್ಬರು ವಿಮರ್ಶಕರು ಬರೆಯುತ್ತಾರೆ. ಈ ತತ್ವವನ್ನು ತಿಳಿದು ಅದನ್ನೇ ಅನುಸರಿಸುವ ಅನೇಕ ನಾಟಕ ಕಂಪನಿಗಳು ಕರ್ಣಾಟಕದಲ್ಲಿ ಹಲವಾರು ವರ್ಷಗಳಿಂದಲೂ ಇವೆಯಲ್ಲಾ!


"ಲಾರಿಗಳನ್ನು ನಡೆಸುವವರಿಗೆ ದೃಷ್ಟಿಶಕ್ತಿ ಚೆನ್ನಾಗಿರಬೇಕು" ಎಂದು ಒಬ್ಬರು ವೈದ್ಯರು ಹೇಳುವರು. ಹೌದು. ಹಾಗಿಲ್ಲದಿದ್ದರೆ ಅವರು ತಮ್ಮ ವಾಹನಗಳನ್ನು ಪಾದಚಾರಿಗಳ ಮೇಲೆ ಬಿಡದೆ ಎತ್ತೆತ್ತಲಾಗೋ ನಡೆಯಿಸಬಹುದು.

"ಭಾರತದ ರಾಜಕೀಯ ರಂಗದಲ್ಲಿ ನನ್ನ ಮುಂದಿನ ಪಾತ್ರವೇನೆಂಬುದನ್ನು ನಾನು ಇಷ್ಟರಲ್ಲೇ ನಿಶ್ಚಯಿಸುವೆನು." ಎಂದೊಬ್ಬರು ಮೊನ್ನೆ ಹೇಳಿದರು ಭಿಕ್ಷಾಪಾತ್ರ ಗೊತ್ತೇ ಇದೆ.

"ಮಧ್ಯಾಹ್ನದ ಉಪಹಾರದ ನಂತರ ಸಮ್ಮೇಳನವು ಸೇರಲಿಲ್ಲ" ಎಂದು ವರದಿಯಾಗಿದೆ. ಉಪಹಾರಕ್ಕೆ ಏನೇನು ಬಡಿಸಿದರೋ ತಿಳಿಯದು.

"ಉಪನ್ಯಾಸ ಮುಗಿದ ಕೂಡಲೇ ಎಲ್ಲರೂ ಶ್ರೀಮಾನ್..................ರವರ ಹತ್ತಿರಕ್ಕೆ ನುಗ್ಗಿ ಅವರನ್ನು ಕೊಂಡಾಡಿ ವಂದಿಸಿದರು" ಎಂದು ಒಬ್ಬರು ಬಾತ್ಮೀದಾರರು ತಿಳಿಸುತ್ತಾರೆ. ಮುಗಿಯುವುದೋ ಇಲ್ಲವೋ ಅಂತ ಗಾಬರಿಗೊಂಡಿದ್ದ ಸಭಿಕರು ಅದು ಮುಗಿದಾಗ ವಂದಿಸಬೇಕಾದದ್ದೇ.

ಸಂಗೀತ ಸಮ್ಮೇಳನದ ಪ್ರಾರಂಭೋತ್ಸವದಲ್ಲಿ ಶ್ರೀಮಾನ್...............ರವರು ಮೊದಲು ದೇವತಾ ಪ್ರಾರ್ಥನೆಯನ್ನು ನೆರವೇರಿಸಿದರು. ಸಂಗೀತ ಕಚೇರಿಗಳಿಂದ ಗಾಯಕರು ಸುರಕ್ಷಿತವಾಗಿ ಹೊರಬರುವ ಹಾಗೆ ಕರುಣಿಸುವ ದೇವರಿಗೆ ಮೊದಲು ವಂದನೆಗಳನ್ನು ಅರ್ಪಿಸಿದ್ದು ನ್ಯಾಯವೇ ಸರಿ.



"ಈ ಕಾಗದಕ್ಕೆ ತೂಕ ಜಾಸ್ತಿ, ಇನ್ನೂ ಒಂದು ಸ್ಟಾಂಪು ಅಂಟಿಸಬೇಕಾಗುತ್ತದೆ" ಎಂದು ಪೋಸ್ಟ್ ಮಾಸ್ಟರು ಹೇಳಿದರೆ, ರಾಯರು, "ಬೇಡಪ್ಪ! ಬೇಡಪ್ಪ! ಇನ್ನೂ ತೂಕ ಜಾಸ್ತಿ ಆಗಿಬಿಡುತ್ತದೆ," ಅಂತ ಹೇಳಿ ಅದನ್ನು ಹಾಗೆಯೇ ಡಬ್ಬಿಯೊಳಕ್ಕೆ ತಳ್ಳಿದರಂತೆ.

"ಯಾವ ವಿಷಯವೇ ಆಗಲಿ ನೀವೇ ಯೋಚಿಸಿ,ನೋಡಿ,ತೀರ್ಮಾನಕ್ಕೆ ಬನ್ನಿ, ಮತ್ತೊಬ್ಬರ ಮಾತು ಕೇಳಬೇಡಿ." ಅಂತ ಒಬ್ಬರು ಹೆಡ್ಮೇಷ್ಟ್ರು ವೊನ್ನೆ ಹುಡುಗರಿಗೆ ಬೋಧಿಸಿದರು. ಹುಡುಗರು ಮಾತ್ರ ಅವರ ಮಾತನ್ನು ಕೇಳಬೇಕೇನು?

❋


"ಗ್ರಹಗಳು ಏಕೆ ಸೂರ್ಯನನ್ನು ಸುತ್ತುತ್ತವೆ?" ಎಂಬುದು ಒಂದು ಲೇಖನದ ವಿಷಯ. ಒಂದೇ ಮಾತಿನಲ್ಲಿ ಹೇಳಬೇಕಾದುದಕ್ಕೆ ಒಂದು ಲೇಖನ ಯಾಕೆ?–ಅವುಗಳ "ಗ್ರಹಚಾರ"–ಅದು!

❋

"ಜಾತಕ ನೋಡಿದರೆ ಆ ಸಾಮಿ ತುಂಬಾ ಶ್ರಮಜೀವಿ; ಆತನಲ್ಲಿ ಶಾಂತ ಸ್ವಭಾವ, ನಯ, ವಿನಯ, ನಮ್ರತೆ, ವಾಚಾಳತೆ........" ಎಂದು ಒಬ್ಬರು ಜೋಯಿಸರು ಪ್ರಾರಂಭಿಸಿದರು. ಒಟ್ಟಿನಲ್ಲಿ ವಿಮಾ ಕಂಪೆನಿ ಏಜೆಂಟರು ಅಂತ ಹೇಳಿದರೆ ತೀರಿತು.

❋

"ಶ್ರೀಮಾನ್‌ರ ಕಾದಂಬರಿಯಲ್ಲಿ ಬರುವ ಒಂದು ಸನ್ನಿವೇಶವನ್ನು ಕಾಳಿದಾಸ ಕನಸಿನಲ್ಲೂ ಕೂಡ ಕಂಡಿರಲಾರ! (ಕರತಾಡನಗಳು) ಪಂಪರನ್ನಾದಿಗಳೂ ವಿವರಣೆಯನ್ನು ಮಾಡಿರಲಾರರು! (ಕೇಳಿ! ಕೇಳಿ!)." ಅಂತಹ ಸನ್ನಿವೇಶ ಯಾವುದೆಂದರೆ, ಬಸ್ಸಿಗೆ ಪೆಟ್ರೋಲ್ ಸಾಲದೆ ಪ್ರಯಾಣ ನಿಂತಾಗ ಕಥಾನಾಯಕನು ಬೈಸಿಕಲ್ ಮೇಲೆ ನಾಯಕಿಯನ್ನು ಕೂರಿಸಿಕೊಂಡು ನಡೆದದ್ದು. ಅಂತಹ ವಿವರಣೆಯೇನೆಂದರೆ, ಕಥಾನಾಯಕನ ಮಾವನು ಅವನಿಗೆ ರೂಪಾಯಿ ನೋಟುಗಳನ್ನೇ ಉರಿಸಿ ಕಾಫಿ ಕಾಯಿಸಿ ಕುಡಿಸಿದ್ದು........"



ಈಗ ಕಾಲೇಜು ಹುಡುಗರಿಗೂ ಕೂಡ ಕಾರ್ ಡ್ರೈವ್ ಮಾಡಬೇಕೆಂಬ ಆಸೆ! ಹಿರಿಯರು ಯಾರೂ ಅಡ್ಡ ಬರಬೇಡಿ ದಯವಿಟ್ಟು!

ಗುಂಡನ ಕಾದಂಬರಿ

ನಾನು ಆದಿನ ಮಲ್ಲೇಶ್ವರದಿಂದ ತಪ್ಪಿಸಿಕೊಂಡು ಬಂದದ್ದೇ ಒಂದು ದೊಡ್ಡ ಕಥೆ. ಮೆಜಸ್ಟಿಕ್ ಹತ್ತಿರ ಹೋಗುತ್ತಲೂ ರಾಮು ಸಿಕ್ಕಿದ; ಅವನು ಬಸ್ಸುಹತ್ತಿಸಿ ಕಂಡಕ್ಟರಿಗೆ ಕಾಸು ಕೊಟ್ಟ. ೧೭ನೇ ಕ್ರಾಸಿನಲ್ಲಿ ಇಳಿಸಿ ಅವನು ಹೆಬ್ಬಾಳದ ಕಡೆ ಪ್ರಯಾಣ ಬೆಳೆಸಿದ. ಕೊಂಚಹೊತ್ತು ತಾರಾಡುತ್ತ ತೂರಾಡುತ್ತ ನಿಂತಿದ್ದೆ. ಆ ಮೇಲೆ ನನಗೂ ಬೇಜಾರಾಯಿತು. ಗುಂಡನ ಮನೆ ೧೫ನೇ ಕ್ರಾಸಿನಲ್ಲಿ ಅಂತ ಜ್ಞಾಪಕಬಂತು. ಅತ್ತಲಾಗೆ ಪಾದ ಬೆಳಸಿದೆ. ಗುಂಡನೂ ಇದ್ದ. ನಮ್ಮ ಮಾತು ಕತೆಗಳು ಪ್ರಾರಂಭವಾದುವು. ಮೊದಮೊದಲು ಸ್ವಾರಸ್ಯವಾಗಿಯೇ ಇತ್ತು. ಗುಂಡನಿಗೆ ಕನ್ನಡ ಸೇವೆ ಅಂದರೆ ನೀರು ಕುಡಿದಹಾಗೆ. ಶಿಶುಗೀತೆಗಳಿಂದ ಹಿಡಿದು ಭಾವಗೀತೆಗಳವರೆಗೂ, ಪತ್ತೆದಾರಿ ಕಥೆಗಳಿಂದ ಹಿಡಿದು ಚಿತ್ತಕ್ಷೋಭಾಕ ಕಥೆಗಳವರೆಗೂ, ಅವನ ಲೇಖಣಿಯಿಂದ ಹೊರಬಿದ್ದಿದ್ದುವು. ಚಲನಚಿತ್ರ ನಿರ್ಮಾಪಕರಿಗಾಗಿಯೇ ಬರೆದ ಕೆಲವು ರೇಖಾಚಿತ್ರಗಳೂ ಗುಂಡನ ಹತ್ತಿರ ಇವೆ; ಆದರೆ ಅವುಗಳಿಗೆ ಇನ್ನೂ ಅವನು 'ರಕ್ತಮಾಂಸಗಳನ್ನು ತುಂಬಿರಲಿಲ್ಲ.' ಗುಂಡನ ಮನೆಗೆ ಅವನು ಈಚೆಗೆ ಒಂದು ಹೊಸ ಹೆಸರಿಟ್ಟಿದ್ದ—"ಉರಿಗನ್ನಡಂ" ಅಂತ! ಅವನ್ನು ನೋಡುತ್ತಲೂ ನನಗೆ ಅಯ್ಯೋ ಎನಿಸಿತು.

ಮನೆಯೊಳಕ್ಕೆ ಪ್ರವೇಶಿಸುತ್ತಲೂ ಗುಂಡ ನನ್ನ ಸುತ್ತ ಕುಣಿದಾಡಿದ; 'ಬಾರೋ ನನಕಂದ, ಬಾರೋ ನನ ಚಿನ್ನ' ಎಂದು ಹಾಡಿದ. "ಗೆಳೆಯನೇ ಗಿಳಿವಿಂಡು!" ಎಂದು ಹೊಗಳಿದ. "ಎಳೆತನದ ಗೆಳೆತನಮೇ ಎಂದೆಂದು ಮಳಿಯದಿರ್" ಎಂದು ನಿಟ್ಟುಸಿರುಬಿಟ್ಟ. ನನಗೆ ಯಾಕೋ ಭಯವಾಯಿತು. ಗುಂಡನ ಮೆದುಳನ್ನು ತಣ್ಣಗಿರಿಸು ಎಂದು ಹಿಮವದ್ಗೋಪಾಲಸ್ವಾಮಿಗೆ ಹರಕೆ ಮಾಡಿಕೊಂಡೆ.

ಅಷ್ಟುಹೊತ್ತಿಗೆ ಗುಂಡ ಒಂದು ಹಳೆಯ ಕಡತ ತೆಗೆದು ನನ್ನೆದುರು ಕುಳಿತ. "ನೋಡು ವೆಂಕಟೇಶು! ಬಹಳ ದಿನದಿಂದ ನಿನ್ನ ಹೆಸರನ್ನ ನನ್ನ ಕಾದಂಬರಿ ನಾಯಕನಾಗಿ ಕೊಟ್ಟು ನಿನ್ನ ಜನ್ಮವನ್ನ ಸಾರ್ಥಕಮಾಡಬೇಕು ಅಂತಿದ್ದೆ; ನಮ್ಮ ಸ್ನೇಹದ ಗುರುತೊಂದನ್ನು ಜಗತ್ತಿನಲ್ಲಿ ಬಿಟ್ಟುಹೋಗಬೇಕೆಂದಿದ್ದೆ. ಈ ಕಾದಂಬರಿಯನ್ನ ಬರೆಯುವಾಗ ನಾನು ಕಥಾನಾಯಕ, ಅವನ ಪ್ರೇಯಸಿ ಇವರಿಬ್ಬರ ಹೆಸರನ್ನ ಭರ್ತಿ ಮಾಡಲೇ ಇಲ್ಲ. ಹಾಗೆಯೇ ಖಾಲಿಬಿಟ್ಟದ್ದೇನೆ. ನಿನ್ನ ಹೆಸರು ಹಾಕೋಣ ಅಂದರೆ, ನಾಳು ಸ್ಥಳ ಸಾಲದು. ವೆಂಕಟೇಶಾಚಾರ್

ಅಂತ ಹಿಡಿಸುವುದಿಲ್ಲ ಇಷ್ಟು ಜಾಗದಲ್ಲಿ. "ವೆಂಕಟೇಶ" ಅಷ್ಟು ಮಾತ್ರ ಹಾಕಿದರೆ ಆಭಾಸ! ಅದೂ ಅಲ್ಲದೆ ನಿನ್ನ ಪ್ರೇಯಸಿ ನಾಮಧೇಯ ಕೂಡ ಇಷ್ಟರಲ್ಲಿ ಅಡಗುತ್ತದೊ ಏನೋ...."

"ನನಗಿನ್ನೂ ಪ್ರೇಯಸಿಯೇ ಇಲ್ಲ ಕಣೋ, ಗುಂಡಾ! ನಿನ್ನಹಾಗೆ ಭಾವನಾ ಪ್ರಪಂಚ ನನಗೆಲ್ಲಿಂದ ಬರಬೇಕು! ಭಾವನ ಮನೆಯಲ್ಲೇ ಹಿಟ್ಟು ತಿಂದುಕೊಂಡು ಬಿದ್ದಿರೋ 'ಇಂದಾಗೆ' ಗುಮಾಸ್ತೆ-ನಾನು".

"ಹಾಗಾದರಿನ್ನೊಂದು ಕೆಲಸಮಾಡು! ನಾಯಕನಾಯಕಿಯರಿಗೆ ನೀನೇ ಹೆಸರು ಹೇಳು. ನನ್ನ ನಿನ್ನ ಸ್ನೇಹದ ಸ್ಮಾರಕವಾಗಿ ಆ ಹೆಸರುಗಳನ್ನೇ ಹಾಕಿಬಿಡುತ್ತೇನೆ"

"ವೆಂಕಟರಮಣ, ಪದ್ಮಾವತಿ ?"

"ಅಯ್ಯೋ! ಅಯ್ಯೋ! ಅವರಿಬ್ಬರ ಹೆಸರುಗಳೂ ಚಿಕ್ಕದಾಗಿರಬೇಕು. ಎರಡಕ್ಷರ, ಮೂರಕ್ಷರ ಸಾಕು. ಇಲ್ಲದೆ ಹೋದರೆ, ಸಾವಿರಾರುಸಲ ಉಪಯೋಗಿಸಬೇಕಾಗಿರುವುದರಿಂದ ಕಾಗದ ಖರ್ಚು ವಿಪರೀತವಾಗುತ್ತದೆ"

"ಲಕ್ಕ, ಲಕ್ಕಿ ?"

"ಚೆನ್ನಾಗಿದೆ! ತಿಳಿಗನ್ನಡದ ಹೆಸರುಗಳು!! ಚಿಕ್ಕದಾಗಿವೆ!! ಒಪ್ಪಿದೆ. ಆದರೆ, 'ಕ್ಕ' ಒತ್ತು ಮುದ್ರಣಾಲಯದಲ್ಲಿ ಎಂಟು ಹತ್ತಕ್ಕಿಂತ ಇರಲಾರದು, ಇಲ್ಲಿ ನೋಡು! ಈ ಒಂದು ಪುಟದಲ್ಲೇನೆ ಶುಷ್ಕ, ನಿಷ್ಕಪಟ, ತಸ್ಕರನಂತೆ ಭಾಸ್ಕರನು, ಉಕ್ಕರಿಯೇ ಚಿಕ್ಕ ಮಕ್ಕಳಿಗೆ ಸಕ್ಕರೆ, ಪಕ್ಕನೆ ನಕ್ಕಳು, ಚಿಕ್ಕ ಪುಕ್ಕವ ಕೊಕ್ಕಿನಿಂದ....ಅಂತ ೧೩ ಇವೆ. ಲಕ್ಕ ಲಕ್ಕಿ ಅಂತ ಹೆಸರಿಟ್ಟರೆ, ಅವು ಬೇರೆ ಸೇರಿಕೊಳ್ಳುತ್ತೆ ೧೬ ಸಲ....ಆಗುವುದಿಲ್ಲ.... ಅಚ್ಚುಕೂಟದವರು ಪೇಚಾಡಿಬಿಡುತ್ತಾರೆ...."

"ಮಾದ, ಮಾದಿ ?"

"ಕೂಡದು, ಕೂಡಲೇ ಕೂಡದು. ಮಾದ ಹೋದ, ಮುದಿ ಮಾದಿ, "ಮಾದಿ! ಯಾಕೆ ಯುಗಾದಿಗೆ ಮನೆಗೆ ಹೋದಿ?" ಎಂಬ ಪ್ರಯೋಗಗಳು ಬಂದಾಗ ವಾಚಕರಿಗೆ ಇದು ಕಾದಂಬರಿಯೋ ಕಾವ್ಯವೋ ಎಂಬ ಅನುಮಾನವುಂಟಾಗುತ್ತದೆ."

"ತಿಮ್ಮ....ತಿಮ್ಮಿ....?"

"ಓ ಒಂದು ವಿಷಯ ಹೇಳುವುದಕ್ಕೆ ಮರೆತೆ. ಅವರಿಬ್ಬರೂ ಧರ್ಮಶಾಸ್ತ್ರ ರೀತ್ಯಾ ಗಂಡಹೆಂಡಿರಲ್ಲ. ಅವರ ಜಾತಿ ಮತ ಕುಲಗಳೇ ಬೇರೆ ಬೇರೆ. ಪ್ರೇಯಸಿಗಿಂತ ಆತ ಎಂಟು ವರ್ಷ ಚಿಕ್ಕವನು. ಬಹಳ ಸ್ವಾರಸ್ಯವಾಗಿದೆ, ಕಾದಂಬರಿ! ನಾಲ್ಕು ಗಂಟೆ ಕೂರುವುದಕ್ಕೆ ಪುರಸತ್ತಿದ್ದರೆ ಓದಿ ತೋರಿಸಿಬಿಡುತ್ತೇನೆ"

"ಬೇಡ, ಬೇಡ! ಎರಡು ಹೆಸರು ಹೇಳಿಬಿಡುತ್ತೇನೆ. ಭರ್ತಿ ಮಾಡಿಬಿಡು. ನನಗೆ ಹೊತ್ತಾಯಿತು. ಸುರೇಶ, ಸುಬ್ಬಮ್ಮ....? "

"ಪರವಾಗಿಲ್ಲ. ನಿನ್ನ ಭಾವನಾ ಶಕ್ತಿಯ ಕೂಡಾ ಕುದುರುತ್ತಾ ಇದೆ. ಆದರೆ, 'ಸುಬ್ಬಮ್ಮ' ಸರಿಯಿಲ್ಲ. ಆ ಹೆಸರನ್ನ ಆಗಲೇ ಒಬ್ಬರು ಹಾಳುಮಾಡಿ

ಬಿಟ್ಟಿದಾರೆ. ಅದೂ ಅಲ್ಲದೆ, ಬೆಳದಿಂಗಳಿನಲ್ಲಿ ಕಿಟಕಿಯಾಚೆ ನಿಂತು ಕಥಾ ನಾಯಕನು....ಸುಬ್ಬೀ! ಸುಬ್ಬೀ....ಅಂತ ಸರಸ ಸಲ್ಲಾಪಮಾಡಿದರೆ ರಸಾಭಾಸವಾಗುತ್ತದೆ...."

"ನಿಜ, ನಿಜ, ಗೋಪಾಲು, ಲಿಲ್ಲಿ.... ಅಂತ ಇಟ್ಟುಬಿಡು, ಸಾಕು!" "ಲಿಲ್ಲಿ, ಬೇಡ. ಲಿಲಿ ಅಂತ ಹೇಳುವುದೇ ಸರಿ. ಲಿಲಿ ಅಂದರೆ ಇಂಗ್ಲೀಷಿನಲ್ಲಿ ಒಂದು ತರಹ ಪಕ್ಷಿ ಅಲ್ಲವೇನೋ?"

"ಹೌದು! ಒಂದು ತರಹ ಹಸುರು ಪಕ್ಷಿ! ಹಾಕಿಬಿಡು, ಆ ಹೆಸರನ್ನೇ.... ನನಗೆ ಹೊತ್ತಾಯಿತು"

"ಆಗಬಹು....ದಾಗಿತ್ತು. ಆದರೆ ನನ್ನ ಕಾದಂಬರಿಯ ರೀತ್ಯಾ ನಾಯಕಿಯ ದೇಹ ಬರಬರುತ್ತಾ ಸ್ಥೂಲವಾಗುತ್ತಾ ಬರುತ್ತದೆ. ಅವಳ ಸ್ವಭಾವ ಮೊದಲಿಂದಲೂ ಸಿಡುಕು. ಸಿಡುಬಿನ ಮಚ್ಚೆಗಳು ಮುಖದ ತುಂಬ. ಆದ್ದರಿಂದ, ಅವಳನ್ನ ಲಿಲಿ! ಲಿಲಿ! ಲಿಲಿ! ಲಿಲಿ! ಅಂತ ಕರೆಯುವುದಕ್ಕೆ ಕಥಾನಾಯಕನೊಪ್ಪುವುದಿಲ್ಲ"

"ಒಳ್ಳೇ ಗ್ರಹಚಾರವಾಯಿತಲ್ಲಾ, ಗುಂಡು! ಹಾಗಾದರೆ ನೀರಜ, ಜಲಜ ಅಂತ ಹಾಕಿಬಿಡು....ತಾವರೆ ಅಂತಲೂ ಅರ್ಥವಾಗುತ್ತದೆ; ಮೊಸಳೆ ಅಂತಲೂ ಆಗುತ್ತದೆ...."

"ನಾಯಕನಿಗೆ?"

"ಮಾಧವ?"

"ಅಷ್ಟು ಸಪ್ಪೆ ಪ್ರಕೃತಿಯಲ್ಲ, ನಾಯಕನದು"

"ಪೂರ್ಣಬೋಧರಾಯ?"

"ಕೂಡದು! ಕೂಡದು! ಅದೇ ಹೆಸರಿನ ಮೇಷ್ಟರೊಬ್ಬರು ನನಗೆ ಪಾಠ ಹೇಳಿದರು. ಅಷ್ಟು ಒಳ್ಳೆಯ ಕಥಾ ನಾಯಕನಿಗೆ ಅವರ ಹೆಸರನ್ನ ಕೊಡಬಾರದು...."

"ಶ್ರೀನಿವಾಸ?"

"ಛೆ....ಛೆ! ಅದೇ ಹೆಸರಿನ ಶೆಟ್ಟರೊಬ್ಬರಿಗೆ ನಾನು ನೂರು ರೂಪಾಯಿ ಸಾಲ ತೀರಿಸಬೇಕು....ನಾಲ್ಕು ವರ್ಷದಿಂದ ಬಾಕಿ ನಿಂತಿದೆ...."

"ಗೋವಿಂದ"

"ಅಷ್ಟು ಶಾಂತಸ್ವಭಾವವಿಲ್ಲ, ಕಥಾ ನಾಯಕನಿಗೆ"

"ನನಗೆ ಹೊತ್ತಾಯಿತು....ಗುಂಡಾ! ಬಸ್ಸು ಬರುತ್ತಾಯಿದೆ....ಕೇಸರಿ ಅಂತ ಹಾಕಿಬಿಡು...."


"ಯಾರಿಗೆ? ನಾಯಕನಿಗೋ ನಾಯಕಿಗೋ...."

"ಬರುತ್ತೇನೆ, ಗುಂಡು! ಬಸ್ಸು ಬಂತು....ನಾಯಕಿಯ ಹೆಸರು ಆಗಲೇ ಹೇಳಿವೆನಲ್ಲೋ...."

"ಏನು ಅಂತ?...."

"ನನಗೆ ಮರೆತುಹೋಯ್ತು, ಆಗಲೇ ....ನೀನೇ ಹೇಳಿಬಿಡು!"

"ಹಾಳಾಗಿ ಹೋಯ್ತು!....ಹೋಲ್ಡಾನ್....ಹೋಲ್ಡಾನ್"



ಬ್ರೇಕಿಲ್ಲ !

ಅಕ್ಷರಸ್ಥ

ನನ್ನ ಸ್ನೇಹಿತ ಘಟುವಿನ ವಿಚಾರ ನಿಮಗೆ ಹೇಳಲೇಬೇಕು. ಘಟು ಎಂಬುದು, ನಿಮಗೆಲ್ಲಾ ತಿಳಿದಂತೆಯೇ, ಅವನ ಹೆಸರಲ್ಲ-ಅವನನ್ನು ಪ್ರೇಮದಿಂದ ನಾವೆಲ್ಲರೂ ಕರೆಯುತ್ತಿದ್ದ ಹೆಸರು. ಈತನ ತಂದೆಯ ಹೆಸರು, ಭೀಮಾರ್ಯರಾಯ. ತಂದೆಯ ಶಕ್ತಿಯೆಲ್ಲಾ ಅವನ ಹೆಸರಿನಲ್ಲಡಗಿದ್ದಿತು. ಹೆಸರಿನ ಶಕ್ತಿಯೆಲ್ಲಾ ಮಗನಲ್ಲಿ ರೂಪುಗೊಂಡಿತ್ತು. ಹೀಗಾಗಿ ಶಾಲೆಯಲ್ಲಿ ಅವನನ್ನು ಘಟೋತ್ಗಜ ಎಂದು ಕರೆಯಲಾರಂಭಿಸಿದೆವು. ಆದರದ ಗುರುತಾಗಿ ಅವನ ಹೆಸರು ಘಟು ಎಂದಾಯ್ತು. ಈ ಹೆಸರೇ ಸ್ಥಿರವಾಗಿ ಹೋಗಿ ಅವನ ತಂದೆತಾಯಿಯರು ಇಟ್ಟಿದ್ದ ದಿಟವಾದ ಹೆಸರು ನಮಗೆಲ್ಲಾ ಮರೆತೇ ಹೋಯಿತು.

ಘಟುವಿಗೆ ಹೆಸರಿಗೆ ತಕ್ಕಂತೆ, ರೂಪ ದೇಹ ಶೌರ್ಯ ಎಲ್ಲವೂ ಇದ್ದುವು. ಇವನಿಗೆ ಒಂದು ಗುಣ ಬಹಳ ಮಟ್ಟಿಗೆ ಪ್ರಚಂಡವಾಗಿತ್ತು-ಚಿತ್ರಗಳನ್ನು ಬರೆಯುವ ಗುಣ-ಬೋರ್ಡಿನ ಮೇಲೆ ಮೇಷ್ಟರ ವ್ಯಂಗ್ಯಚಿತ್ರ ಬರೆದರೆ ಹಾಲು ಹಸುಳೆಯು ಕೂಡ ಗುರ್ತಿಸುವಂತಿತ್ತು. ಈ ಗುಣದಿಂದ ಶಾಲೆಯ ಬಾಲಕರಿಗೆಲ್ಲಾ ಇವನು ಪರಮ ಮಿತ್ರನಾಗಿದ್ದನು. ಆದರೆ ಬೊಂಬೆ ಬರೆದರೆ, ಪರೀಕ್ಷೆಯಲ್ಲಿ ನಂಬರು ಕೊಡುತ್ತಾರೆಯೆ? ಪರೀಕ್ಷೆಯಲ್ಲಿ ಪಲ್ಟಿ ಹಾಕುವುದರಲ್ಲಿ ನಿಸ್ಸೀಮನಾದನು. ಹಾಗಾಗಿ ನಾನು ಕಾಲೇಜಿಗೆ ಹೋದಾಗ ಇವನ ಸಂಬಂಧವು ದೂರವಾಯಿತು.

ಇದಾದ ಹತ್ತಾರು ವರ್ಷಗಳಾದುವು. ನಾನು ನೋಡಿದ್ದು ತೋರಿದು ಇವುಗಳನ್ನು ಬರೆದುಕೊಂಡು ದಿನಪತ್ರಿಕೆಯ ಕಛೇರಿಯೊಂದರಲ್ಲಿ ಜೀವನ ನಡೆಸುತ್ತಿದ್ದೆ. ಒಂದು ದಿನ ಸಾಯಂಕಾಲ ಗಾಳಿ ಸವಾರಿಗೆಂದು ಕಬ್ಬನ್ ಪಾರ್ಕಿನಲ್ಲಿ ಓಡಾಡುತ್ತಿದ್ದೆ. ಸ್ವಲ್ಪ ಅಡ್ಡಾಡಿದ ಮೇಲೆ ಹಾಗೆಯೇ ಹತ್ತಿರಿದ್ದ ಒಂದು ಕುರ್ಚಿಯ ಮೇಲೆ ವಿಶ್ರಮಿಸಿಕೊಳ್ಳಲು ಕುಳಿತುಕೊಂಡೆ. ಆ ಕುರ್ಚಿಯ ಮುಂದೆಲ್ಲಾ ಮರಳಿತ್ತು. ಆ ಮರಳಿನ ಮೇಲೆ ಯಾರೋ ಒಂದು ಬೆತ್ತದ ತುದಿಯಿಂದ ಒಂದು ಚಿತ್ರವನ್ನು ನಿರ್ಮಿಸಿದ್ದರು. ಆ ಚಿತ್ರವು ಸಾಕ್ಷಾತ್ ಗಾಂಧಿಯವರಂತೆ ಇದ್ದಿತು. ಆಹಾ! ಏನು ಕುಶಲತೆ! ಮರಳುಪಾಲಾಗಬೇಕೆ ಈ ಕುಶಲತೆ ಎನ್ನುಕೊಳ್ಳುತ್ತಿದ್ದೆ. ಆಗ ಜ್ಞಾಪಿಸಿಕೊಂಡೆ ನನ್ನ ಬಾಲ್ಯ ಸ್ನೇಹಿತ ಘಟುವನ್ನು. ಆತನ ಚಿತ್ರ ಕುಶಲತೆಯನ್ನು. ಆ ವೇಳೆಗೆ ಸ್ಪಂಧವನಂತಿದ್ದ ಆನಂದವು

ಬಾಹುವೊಬ್ಬನು ನಾನು ಕೂತಿದ್ದೆಡೆಗೆ ಬಂದು, "ಸ್ವಾಮಿ ನನ್ನ ಚಪ್ಪಲಿ ಇಲ್ಲಿ ಬಿಟ್ಟಿದ್ದೇನೆಯೇ, ನಾನಿಲ್ಲಿ ಸ್ವಲ್ಪ ಹೊತ್ತಿನ ಕೆಳಗೆ ಕುಳಿತಿದ್ದೆ ಎಂದು ಹೇಳಿದನು." ಇವನನ್ನ ಎಲ್ಲೋ ನೋಡಿದ ಹಾಗೆ ಮಸಕು ಮಸಕು ನೆನಪು. ಇವನನ್ನು ಇನ್ನೊಮ್ಮೆ ನೋಡಿದೆ, ಆ ಮರಳು ಚಿತ್ರವನ್ನು ಮರಳಿ ನೋಡಿದೆ. ಇವನ ಕೈಯಿನಲ್ಲಿದ್ದ ಬೆತ್ತದ ತುದಿಯನ್ನೂ ನೋಡಿದೆ.

ಸರಿ. ನೀವು ಊಹಿಸಿದಂತೆಯೇ ಆಯಿತು.

"ಏನೊ ಘಟು ಇಷ್ಟು ದಿವಸ ಎಲ್ಲಿ ಮಾಯವಾಗಿದ್ದೆಯೋ"

"ನೀನು ರಾಶಿಯಲ್ಲವೇನೊ. ನೀನೆಲ್ಲೊ ಹೋಗಿದ್ದೆ. ಘೋಷಾದಲ್ಲಿದ್ದೆಯೇನೊ"

"ನಾನಿಲ್ಲೇ ಇದ್ದೇನಲ್ಲೊ. ಆ....ದಿನ ಪತ್ರಿಕೆಯ ಕಛೇರಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನೀನೇನು ಮಾಡುತ್ತಿದ್ದೀಯಾ ಯಾವ ಊರಿನಲ್ಲಿದ್ದಿಯಾ."

"ನಾನು ಒಂದೆರಡು ವರ್ಷಗಳಿಂದ ಇದೇ ಊರಿನಲ್ಲಿದ್ದೇನೆ. ಚಿತ್ರ ಬರೆದು ಜೀವನ ನಡೆಸಲು ಹೋದೆ. ಸಾಗಲಿಲ್ಲ ಈಗ ನಾನೂ ನಿನ್ನ ಹಾಗೆ ಅಕ್ಷರಸ್ಥನಾಗಿದ್ದೇನೆ"

"ಹಾಗಂದರೇ ನೀನೂ ಬಾತ್ಮೀದಾರನೇ ? "

"ಪರಮಾತ್ಮ—ಛೀ—ನನಗಿನ್ನೂ ಆ ಗತಿಯು ಬಂದಿಲ್ಲ. ನಾನಿನ್ನೂ ಮರ್ಯಾದಸ್ಥನಾಗಿದ್ದೇನೆ—ಅಕ್ಷರಸ್ಥನಾದರೂ."

"ನನಗೊಂದೂ ತಿಳಿಯುವುದಿಲ್ಲ. ನೀನು ವಿಶದವಾಗಿ ಹೇಳು."

ಆಗ ಸಾವಧಾನವಾಗಿ ಘಟುವು ಹೇಳಲಾರಂಭಿಸಿದ ತನ್ನ ಜೀವನ ಚರಿತ್ರೆಯನ್ನು—

"ನೋಡು. ರಾಶಿ. ಮೊದಲೇ ಹೇಳಿದಂತೆ ಕೆಲಕಾಲ ಚಿತ್ರಗಳನ್ನು ಬರೆದು ಹೊಟ್ಟೆ ಹೊರೆದು ಕೊಳ್ಳೋಣವೆಂದು ಪ್ರಯತ್ನಿಸಿದೆ. ಏನೂ ಸಾರ್ಥಕವಾಗಲಿಲ್ಲ. ಕಡೆಗೆ ನನಗೊಬ್ಬ ಸ್ನೇಹಿತನು ಸಿಕ್ಕಿದ. ಆತನು ನನ್ನ ಚತುರತೆಯನ್ನು ಕಂಡಿದ್ದನು. ಅವನು ನನಗೊಂದು ಸಲಹೆ ಕೊಟ್ಟ. "ಈ ಅಂಗಡಿಗಳ ಬೋರ್ಡ್‌ನ್ನು ಬರೆಯುವುದನ್ನು ಆರಂಭಿಸು. ನಿನಗೆ ಸಾಕಾದಷ್ಟು ವ್ಯಾಪಾರವಾಗುತ್ತೆ." ನಾನಂದೆ "ಯಾರು ಬೋರ್ಡು ಬರೆಸುತ್ತಾರೆ ಈಗ. ಒಂದು ಬೋರ್ಡನ್ನು ಅಂಗಡಿ ಇಟ್ಟಾಗ ಬರೆಸಿದರೆ. ಅಂಗಡಿ ದಿವಾಳಿಯಾಗುವ ತನಕ ಬೇರೆ ಬೋರ್ಡು ಬೇಕಾಗುವುದಿಲ್ಲ. ಈಗೀಗ ಕಾಮನ ಹಬ್ಬವಾದರೂ ಹೊಸ ಬೋರ್ಡುಗಳು ಬೇಕಾಗುವುದಿಲ್ಲ. ಏಕೆಂದರೆ ಬೋರ್ಡುಗಳನ್ನೆಲ್ಲಾ ತಗಡಿನ ಮೇಲೆ ಬರೆಸುತ್ತಾರೆಯೇ ವಿನಹಾ ಹಲಗೆಗಳ ಮೇಲೆ ಬರೆಸುವುದಿಲ್ಲಾ."

ಆಗ ಅವನಿಗೊಂದು ಮೆದುಳು ಮಿಂಚು ಹೊಳೆಯಿತು "ನೋಡು ಘಟ ಈಗಿರುವ ಬೋರ್ಡುಗಳು ಮಾಸಿಹೋದರೂ ಬೇರೆ ಬರೆಸುವುದಿಲ್ಲ. ಬೇರೆ ಬರೆಸುವಂತೆ ಮಾಡಬೇಕಾದರೆ ಇರುವ ಬೋರ್ಡುಗಳು ವ್ಯಂಗ್ಯವಾಗಬೇಕು. ಹಾಗೆ ಮಾಡುವುದು ಏನೂ ಕಷ್ಟವಿಲ್ಲ. ಕತ್ತಲೆಯಾಗುತ್ತಲೂ ಅಕ್ಷರಗಳನ್ನು ವ್ಯತ್ಯಾಸಪಡಿಸು. ಮಾರನೆಯ ಬೆಳಿಗ್ಗೆ ನಾನು ಹೋಗಿ 'ಹೊಸ ಬೋರ್ಡುಗಳನ್ನು ಸುಲಭ ಕ್ರಯಕ್ಕೆ ಬರೆಯುತ್ತೇವೆ ಎಂದು ಹೇಳುತ್ತೇನೆ. ನೀನು ಹೊಸ ಬೋರ್ಡನ್ನು ಬರೆಯಬಹುದು. ಬಂದ ಹಣದಲ್ಲಿ ಎರಡು ಭಾಗ ನಿನ್ನದು ಒಂದು ಭಾಗ ನನ್ನದು. ನನಗೊಂದು ಭಾಗ ಏತಕ್ಕೆಂದರೆ, "ನಿಮ್ಮ ಬೋರ್ಡು ಕೆಟ್ಟಿದೆ ಸ್ವಾಮಿ ಎಂದಾಗ, ನನಗೆ ಅಪಾಯ ಸಂಭವಿಸುವ ಪ್ರಮೇಯ ಉಂಟಾಗಬಹುದು"

ಈಗ ಈ ವ್ಯಾಪಾರವನ್ನೇ ನಾವು ಮಾಡುತ್ತಿದ್ದೇವೆ. ತಕ್ಕಮಟ್ಟಿಗಿದೆ ವ್ಯಾಪಾರ." ಎಂದು ತನ್ನ ಚರಿತ್ರೆಯನ್ನು ಮುಗಿಸಿದ.

ನನಗೆ ಬೋರ್ಡುಗಳನ್ನು ಹೇಗೆ ವ್ಯಂಗ್ಯ ಪಡಿಸುವುದು ಅವೇನು ಚಿತ್ರಗಳೇ-ಅವಕ್ಕೇನು ಜೀವವಿದೆಯೇ-ಎಂಬ ಸಂದೇಹ. ಕಡೆಗೆ ಬಗೆಹರಿಯದೆ ಅವನನ್ನೇ ಕೇಳಿದೆ.

ಅವನು ಉತ್ತರ ಕೊಟ್ಟ "ಅಯ್ಯೊ ನೀನು ಅಕ್ಷರಸ್ಥ ಎಂದಿದ್ದೆ ನನ್ನಂತೆಯೇ-ಇಷ್ಟು ಗೊತ್ತಾಗಲಿಲ್ಲವೇ. ಈಗ ನೋಡು.

"ದಂತ ಚಿಕಿತ್ಸೆ" ಅಂತ ಬೋರ್ಡು ಇರುತ್ತೆ. ಅದನ್ನು ಬಲು ಸುಲಭವಾಗಿ "ಆದ್ಯಂತ ಚಿಕಿತ್ಸೆ" ಎಂದು ಮಾಡಬಹುದು. ದಂತ ಚಿಕಿತ್ಸೆಗೆ ಹೋಗುವಾಗಲೇ ಅರ್ಧ ಜಂಘಾಬಲ ಉಡುಗಿ ಹೋಗಿರುತ್ತೆ. ಈ ಬೋರ್ಡನ್ನು ನೋಡಿದ ಮೇಲೆ ಒಳಗೆ ಯಾರಾದರೂ ಹೋಗುತ್ತಾರೆಯೇ ?

ಹಾಗೆಯೇ "ಸ್ತ್ರೀ ಸಮಾಜ"ವನ್ನು "ಶಾಸ್ತ್ರೀ ಸಮಾಜ" ಎಂದು ಮಾಡಿದರೆ ಬೇರೆ ಬೋರ್ಡು ಬರೆಸುವುದಿಲ್ಲವೆ.

"ಶ್ರೀ....ರಾಯರು. ಲಾಯರು" ಎಂಬ ಬೋರ್ಡನ್ನು "ಶ್ರೀ....ರಾಯರು ಕಲಾಯರು" ಎಂದರೆ ಯಾವ ಕಕ್ಷಿಗಾರ ತಾನೇ ಅವರಲ್ಲಿಗೆ ಕಲಾಯಿ ಮಾಡಿಸಿಕೊಳ್ಳಲು ಹೋಗುತ್ತಾನೆ.

"ಫಲಹಾರ ಮಂದಿರ"ವನ್ನು "ವಿಫಲಾಹಾರ ಮಂದಿರ" ಮಾಡುವುದು ಸುಲಭ. ಹಾಗೆ ಮಾಡಿದರೆ ಅನ್ವರ್ಥ ನಾಮಧೇಯವೂ ಆಗಬಹುದು. ಆದರೆ ತಾನೇ ಮಂದಿರದ ಮಾಲೀಕನೂ ಮಾಣಿಯೂ ಇದನ್ನು ನೋಡಿಕೊಂಡು ಸಂತೋಷಪಡುವರೇ?"

"ರಂಗ ವೈದ್ಯಾಲಯ"ವು "ಬಹಿರಂಗ ವೈದ್ಯಾಲಯ"ವಾದರೆ ಯಾವ ರೋಗಿಯು ತಾನೇ ಧೈರ್ಯವಾಗಿ ಒಳಹೋಗುವನು? ಗುಟ್ಟಿನಲ್ಲೇ....ಮಿಶ್ರಿ ಹಲ್ವಾವನ್ನು ಸೇವಿಸುವನು.

ಹೀಗೆಯೇ ಇರುವ ಬೋರ್ಡುಗಳನ್ನೆಲ್ಲಾ ಸಜೀವವನ್ನಾಗಿ ಮಾಡಬಹುದು. ಆದರೆ ಕುಶಲತೆಯು ಬೇಕು. ಸಾದಾ ಅಕ್ಷರಸ್ಥರಿಂದ ಆಗದ ಕೆಲಸ. ನಮ್ಮಂತಹ ಅಕ್ಷರಸ್ಥರು, ಅಕ್ಷರದ ಸರ್ವ ರೂಪನ್ನು ಕಂಡವರು, ಇವರುಗಳಿಂದ ಸಾಧ್ಯ" ಎಂದು ಮುಗಿಸಿದನು.

ಹಾಗೆಯೇ ಅವನನ್ನು ಇನ್ನೆರಡು ಮಾತಾಡಿ ಬೀಳ್ಕೊಟ್ಟೆ. ಮನೆಗೆ ಹಿಂತಿರುಗುವಾಗ ಯೋಚಿಸಿದೆ. ಅವನೇನೋ ಷಹರಿನಲ್ಲಿ ತನ್ನ ಚತುರತೆಯಿಂದ ಜೀವಿಸುತ್ತಿದ್ದನು. ಅವನಂತೆ ನಾನೂ ಅಕ್ಷರಸ್ಥನಾದರೂ, ಅಕ್ಷರಗಳ ಸಕಲ ಸೊಬಗನ್ನೂ ಕಂಡಿರಲಿಲ್ಲವಲ್ಲಾ ಎಂದು ಶೋಕಿಸಿದೆ. ನೀವು ಅಕ್ಷರಸ್ಥರಾದರೆ ಒಪ್ಪುವುದಿಲ್ಲವೇ?

ಕ ಡ್ಡಿ

ಒಬ್ಬನೇ ಒಬ್ಬ! ಅಸಹಾಯ ಶೂರ. ಉಳಿದವರೆಲ್ಲರಲೂ ಆಗಲೇ ಪರಗತಿಯನ್ನೈದಿದ್ದರು. ರೈಲು ರಸ್ತೆಯ ಇಕ್ಕೆಲದಲ್ಲಿಯೂ, ಯೇ ಅಗ್ನಿದಗ್ಧಾಃ ಕೆಲವರು ಯೇ ಅನಗ್ನಿದಗ್ಧಾಃ ಕೆಲವರು, ಬಿದ್ದು ಮಣ್ಣುಪಾಲಾದರು. ಈಗ, ಅವನಲ್ಲದೆ ಆತನಿಗೆ ಯಾರೂ ನೆರವಾಗುವವರಿಲ್ಲ. ಅವನೂ ಕೂಡ ಸಮಯಕ್ಕೊದಗದೆ ಹೋದರೆ ? ಅನಾಹುತ ! ಸರ್ವನಾಶ ! ಇದ್ದಕ್ಕಿದ್ದ ಹಾಗೆ ಯಾರೋ ಅವನನ್ನ ಸೊಂಟ ಹಿಡಿದೆತ್ತಿದರು. ತಲೆ ಕೆಳಗಾಗಿ ಬಗ್ಗಿಸಿ ಗರಗರನೆ ಒತ್ತಿ ಎಳೆದರು. ತಡೆಯಲಾರದ ಉರಿಯಿಂದ ಅವನ ಬೋಳು ಬುರುಡೆಗೆ ಬೆಂಕಿ ಬಿದ್ದಂತಾಯಿತು.

ಬೆಂಕಿ ಬಿದ್ದಂತಾಯಿತು! ಅಷ್ಟೆ! ಬೆಂಕಿ ಬೀಳಲಿಲ್ಲ. ಆದ್ದರಿಂದ ಬಲವಂತದಿಂದ ಹಿಂದೆ ಸೊಂಟ ಹಿಡಿದವರು ಹಾಗೆಯೇ ಬಿಸುಸುಯ್ದು ಅವನನ್ನು ನೆಲಕ್ಕೆಸೆದು ಕಾಲಿಂದ ತುಳಿದು ಬರಿಯ ಪೆಟ್ಟಿಗೆಯನ್ನು ಕೋಪದಿಂದ ಕಿಟಕಿಯ ಆಚೆಗೆ ರೊಯ್ಯನೆ ಬಿಸಾಕಿದರು.

ಅರ್ಪಣೆ

ಬಾತ್ಮೀದಾರರೊಬ್ಬರಿಂದ ಒಂದು ಸಲಹೆ ನಮಗೆ ಬಂದಿದೆ. ಈಚೀಚೆಗೆ ಬರುತ್ತಿರುವ ಪುಸ್ತಕಗಳೆಲ್ಲದರಲ್ಲಿಯೂ ಒಂದೊಂದು ಅರ್ಪಣಾ ಪುಟ ಇರುತ್ತದೆ. ಈ 'ಅರ್ಪಣೆ'ಗಳನ್ನೆಲ್ಲಾ ಒಟ್ಟುಕೂಡಿಸಿ ಒಂದು ಪುಸ್ತಕವನ್ನು ಏಕೆ ಪ್ರಕಟಿಸಬಾರದು ಎಂದು. ಇದನ್ನು ಓದಿದ ಮೇಲೆ ನನಗೆ ಬಹಳ ಯೋಚನೆಗೆ ಇಟ್ಟುಕೊಂಡಿತು. ಇಲ್ಲಿನವರೆವಿಗೂ ಸಾಹಸಿಗಳಾದ ಪ್ರಕಟನಕಾರರು ಇದನ್ನು ಏಕೆ ಮಾಡಿಲ್ಲವೆಂದು? ಅಂತಹ ಪುಸ್ತಕವು ಜನಾದರಣೆಗೆ ಖಂಡಿತವಾಗಿಯೂ ಪಾತ್ರವಾಗುವುದೇ? ಎಂದು.

ಕೆಲವರು ತಮ್ಮ ಪುಸ್ತಕಗಳನ್ನು ಗುರುಹಿರಿಯರಿಗೆ ವಂದನಾಪೂರ್ವಕವಾಗಿ ಅರ್ಪಿಸುತ್ತಾರೆ:

ಶ್ರೀ||........ಯವರಲ್ಲಿ.
ಗ್ರಂಥಕರ್ತನ ಸಪ್ರೇಮ ಸವಿನಯ.
ಸಾಷ್ಟಾಂಗ ನಮಸ್ಕಾರಗಳಿಂದ
ಕೂಡಿದ ಕಾಣಿಕೆ.

ಈ ತೆರನಾದ ಅರ್ಪಣೆಯು ಚೆನ್ನಾಗಿರಲು ಗ್ರಂಥಕರ್ತನಿಗಿಂತಲೂ ಮಿಗಿಲಾಗಿ ಅಚ್ಚುಹಾಕುವವನ ಕಲೆಯು ಮುಖ್ಯ. ಬೇರೆ ಬೇರೆ ತರಹ ಅಚ್ಚುಗಳಿಂದ ವಿಥವಿಥವಾದ ಮೂರು ಮೂಲೆ ಮನೆಗಳಂತೆ ಅರ್ಪಣಾ ಪತ್ರವು ಅಚ್ಚಾಗುವುದು.

ಅಲ್ಲದೆ ಲೇಖಕನಿಗೆ ಯಾರಾದರೂ ಹಿರಿಯರ ಮೇಲೆ ಸೇಡು ತೀರಿಸಿಕೊಳ್ಳಬೇಕಾದರೆ, ಬೇರೆ ಹಿರಿಯರಿಗೆ,-ಇಬ್ಬರಿಗೂ ಪರಿಚಯಸ್ಥರಾದ ಬೇರೆ ಹಿರಿಯರಿಗೆ-ಅರ್ಪಿಸಿದರೆ-ಸಾಕು. ಇದೊಂದು ತೆರನಾಗಿ ಹೆಂಡತಿಯ ಮೇಲಿನ ಕೋಪಕ್ಕೆ ಮಗುವನ್ನು ಹೊಡೆದಂತೆ.

ಇನ್ನು ಕೆಲವು ವೇಳೆ ಅರ್ಪಣೆಯನ್ನು ಸುಪ್ರಸಿದ್ಧನಾದ ರಾಜಕಾರಣಪಟುವಿಗೊ ಚಲನಚಿತ್ರ ತಾರೆಗೊ ಸಂಗೀತ ವಿದುಷಿಗೊ ಮಾಡಬಹುದು. ಲೇಖಕನಿಗೆ ಇವರುಗಳು ಪರಿಚಿತರಾಗಿಲ್ಲದಿದ್ದರೆ ಏನೂ ಬಾಧಕವಿಲ್ಲ. ಓದಿದವರು ಹಾಗೇನೂ ಅನುಮಾನ ಪಡುವುದಿಲ್ಲ, ಲೇಖಕನಿಗೆ ಸುಪ್ರಸಿದ್ಧ ಪುರುಷರಲ್ಲೊಬ್ಬರು ಬಹಳ ಚಿರಪರಿಚಿತರೆಂದೇ ತಿಳಿಯುವರು. ಅಲ್ಲದೇ ಲೇಖಕನ ಮನಸ್ಸಿಗೆ ತೋರಿದ ಬಿರುದುಗಳನ್ನೆಲ್ಲಾ ಈ ರೀತಿಯಾಗಿ ಉಪಯೋಗಿಸಬಹುದು.

ಪ್ರಜಾಸೇವಾ ತತ್ಪರ
ಶ್ರೀಯುತ........ರಿಗೆ.

ಅಖಿಲ ಜನ ಮನೋರಂಜನ
ಶ್ರೀ|| ಪಾತ್ರಧಾರಿಗಳಿಗೆ-ಇತ್ಯಾದಿ.....

ಇವೆಲ್ಲವೂ ಲೇಖಕನ ದೃಷ್ಟಿಯಿಂದ ಬಹಳ ಪ್ರಶಸ್ತವಾದುವು, ಆದರೂ ಓದುಗನಿಗೆ ಅಷ್ಟು ಕಷ್ಟ ಕೊಡುವುದಿಲ್ಲ. ಈ ಕಷ್ಟ ಕೊಡುವ ಅರ್ಪಣೆಗಳು ಈಚೀಚೆಗೆ ಹೆಚ್ಚಾಗಿ ಹೋಗಿವೆ. ನೋಡಿ, ನೆನ್ನೆ ನೋಡಿದ ಪುಸ್ತಕವೊಂದರಲ್ಲಿ,

"ಶ್ರೀ|| ಕ. ಕ್ಷ. ಅವರಿಗೆ,
ಚಿರ ನೆನಪಿನ ಕಾಣಿಕೆಯಾಗಿ.

....

ಕ. ಕ್ಷ. ಯಾರು? ಇದೇನು ಕಕ್ಷನಾಳದ ಸಂಕುಚಿತ ಪ್ರಯೋಗವೇ? ಇದರ ಚಿರ ನೆನಪೇನು? ನೆನಪಿಗೆ ಕಾಣಿಕೆ ಬಹಿರಂಗವಾಗಲು ಉದ್ದೇಶವೇನು? ಇವೆಲ್ಲವೂ ಓದುಗನ ಕಾಷ್ಟ ವ್ಯಸನ. ಕ. ಕ್ಷ. ಯಾರೆಂಬುದು ಓದುಗನಿಗೆ ತಿಳಿಯಲೇ ಬೇಕು. ಅದಿಲ್ಲದಿರುವುದು. ಕಾಣದೇ ಇದ್ದ ನೆಂಟನಿಗಾಗಿ ಸೂತಕ ಇದ್ದಂತೆ.

ಇನ್ನೊಂದು ಅರ್ಪಣೆ ನೋಡಿ.

ಕೋಮಲ ಕಮಲೆಗೆ.
ಆ ಮಂಗಳವಾರದ ಕುರುಹಾಗಿ.

ಈ ಕೋಮಲ ಕಮಲೆಯ ಪರಿಚಯು ನಮಗೆ ಕಿಂಚಿತ್ತೂ ಇಲ್ಲ. ಇವಳೇನು ಹೆಂಗಸೇ? ಜೂಜಿನ ಕುದುರೆಯೋ? ಆ ಮಂಗಳವಾರ ಎಂದರೆ ಯಾವ ಮಂಗಳ ವಾರ! ಇವೆಲ್ಲವೂ ನಮ್ಮ ಮನಸ್ಸನ್ನು ಅನ್ಯಾಯವಾಗಿ ಕದಡುವುದು. ಲೇಖಕನು ಪರಿಚಿತನಾಗಿ ಮರ್ಯಾದಸ್ಥನಾದರೆ, ರಂಗು ರಂಗಾದ ಅನುಮಾನಕ್ಕೆ ಅವಕಾಶವಿರುವುದಿಲ್ಲ. ಇಲ್ಲದಿದ್ದರೆ ಗೊತ್ತೇ ಇದೆ ವ್ಯಾಖ್ಯಾನ.

ಹೊಸ ತೆರನಾದ್ದೊಂದನ್ನು ನೋಡಿ

ಪ್ರಿಯ ಐಯ್ಯಂಗಾರ್,
ಲಂಡನ್ನಿನಲ್ಲಿ ೧೯೩೩ರಲ್ಲಿ ನಡೆದ
ಘಟನೆಯ ಸತ್ಯಚರಿತ್ರೆಯನ್ನು
ಹೇಳಬೇಕೆಂದು ನನ್ನನ್ನು ಕೇಳಿ
ದ್ದಿ. ನೀನೊಪ್ಪು ಇದಿಗೊ.
ಅಂಧಮಾನಪುರ, ನಿನ್ನವ.......

ಅಂಧಮಾನಪುರವಾವುದು, ಲೇಖಕನು ಅಲ್ಲಿಗೇಕೆ ಹೋಗಿದ್ದಾನೆ. ಲಂಡನ್ನಿಗೇಕೆ ಹೋಗಿದ್ದ, ಈ ಘಟನೆಯೇನು. ಆ ಘಟನೆಯ ಪರವಾಗಿ ಪೋಲೀಸಿನವರ ಕೈಗೆ ಸಿಕ್ಕಿ ಹೀಗೆ ಅಂಧಮಾನಪುರಕ್ಕೆ ಗಡೀಪಾರು ಮಾಡಿದರೇ? ಇವನೇನು ರಾಷ್ಟ್ರಪ್ರೇಮಕ್ಕಾಗಿ ಹೀಗಾದನೇ ?- ಬರಿ ಪ್ರೇಮಕ್ಕಾಗಿ ಹೀಗಾದನೇ?

ಈ ನಮೂನೆಯನ್ನು ನೋಡಿ. ಅರ್ಪಣೆಯು ರೂಪಕ್ಕೆ ತಿಲಾರ್ಪಣೆಯಾಗಿದೆ.

ಸರಸಿ! ಸರಸಿ!
ಎನ್ನ ಮನೆಯರಸಿ!
ನಿನ್ನ ಸಹಾಯ
ನಿನ್ನಯ ಮಾಯ
ಅಡಿಗೆಯ ರುಚಿಯು
ಮಾತಿನ ಸವಿಯು,
ಕಾಲಿನ ಝಣ ಝಣ.
ಬಳೆಗಳ ಕಿಣಿಕಿಣಿ.
ಇವುಗಳು ಇಲ್ಲದಿರೆ.

ಈ ಪುಸ್ತಕವೋ ಎಂದೋ. ಹೊರ ಬೀಳುತ್ತಿತ್ತು.

ಸುಂದರ ಸರಸಿಗೆ ಇದು ಅರ್ಪಣೆ. ಅವಳಿಲ್ಲದಿದ್ದರೆ ಈ ಪುಸ್ತಕವು ಬಹಳ ದಿನಗಳ ಮುಂಚೆಯೇ ಪ್ರಕಟವಾಗುತ್ತಿತ್ತಂತೆ. ಕಾಲಂದಿಗೆಯ ಝಣ ಝಣ, ಕೈ ಬಳೆಯ ಕಿಣಿ ಕಿಣಿ ಇವೆಲ್ಲವೂ ಹಳೆಯ ಕಾಲದ ಶಾಸ್ತ್ರೀಕ ಸ್ತ್ರೀಯರ ನೆನಪನ್ನು ತರುವುದು. ಹೆಸರು ಮಾತು ಇವೆಲ್ಲವೂ ನಾಗರಿಕ ಕನ್ನೆಯನ್ನು ಸೂಚಿಸುವುದು. ಈ ತೆರನಾಗಿ ಚಿತ್ರವನ್ನು ಕೊ

ಡದೆ ಓದುಗನನ್ನು ಕರೆ ಕರೆ ಪಡಿಸುವು
ದು ಸುಗುಣವಲ್ಲ.

ಈ ವಿಧವಾದ ಅರ್ಪಣೆಗಳನ್ನೆಲ್ಲಾ,
ಎಂದಾದರೂ ಪುಸ್ತಕ ಭಂಡಾರಕ್ಕೆ
ಹೋದರೆ ಕಾಣಬಹುದು. ಹಾಗಿರಲಾಗಿ
ಇವುಗಳ ಪುಸ್ತಕವನ್ನು ಪ್ರಕಟಿಸಿ ಒಮ್ಮೆ
ಲೇ ಹಣ ಕೊಟ್ಟು ಕೊಂಡವನು ಹಣ
ವಾಗುವಂತೆ ಮಾಡುವುದು ನ್ಯಾಯವೇ?

"ನಡೆ ಹಯವೇ"

(ಶ್ರೀಮಾನ್ ವಿ. ಸೀ. ಯವರಲ್ಲಿ ಕ್ಷಮಾಗಣೆಗಳೊಡನೆ)
["ಮಧ್ಯ ರಾತ್ರಿ ಸಿನಿಮಾ ಮುಗಿಸಿಕೊಂಡು ಮನೆಗೆ ಹೊರಡುವಾಗ"]


ನಡೆ ಹಯವೇ ನಡೆ ಮುಂದಕೀಗ ।
ಚಪಲಕಾರಕ ಈ ಚಲಚಿತ್ರಗಳ ಬಿಟ್ಟು ।
ಚಲಿಸಿ ಹೋಗುವ ನಾವು ಮನೆಗೆ ಈಗ ॥

ನಡು ರಾತ್ರಿ ಮೀರಿಹುದು ಜಗ ನಿದ್ರಿಸುತ್ತಿಹುದು ।
ಒಡನಾಡಿಗಳ ಕೂಡಿ ಮನೆಯ ಸೇರಿ ॥
ತಡೆಯ ವಿನ್ನೆನ್ನ ನೀ ತಾರೆಗಣ ಗಾನೆಯರು ।
ನಡೆ ರಾಜ ಮಾರ್ಗದಲಿ ಮನೆಯ ಕಡೆಗೆ ॥

ತಿರು ತಿರುಗಿ ಎನ್ನ ಕಡೆ ನೋಡದಿರು ಕೆನೆಯದಿರು ।
ಮುಗ್ಗರಿಸಿ ತಡವರಿಸಿ ನಡೆಯ ಬೇಡ ॥
ಹಸಿವಿನಾ ಆತುರವು ಬಲವಾಗಿ ಬಂದಿಹುದು ।
ಬಾಯಾರಿ ಬಾಯಾರಿ ಬಳಲಿಹೆನು ನಾ ॥

ಜನರು ಸುಳಿಯದಗಮ್ಯ ಹಾದಿಯಲಿ ನಡೆ ಈಗ ।
ವನ ಬನದ ಬಳಿಯಲ್ಲೇ ನಡೆದು ಹೋಗು ॥
ಮನವ ಮರೆವಂತೆ ಮಾರ್ದಕವ ಸೇವಿರ್ಪ ।
ಜನರ ವಾಹನವ ಎಚ್ಚರದಿ ನೋಡು ॥

ಬುದ್ಧ ನಡೆಯಲ್ಲಿ ನಡೆದ ಮಾರ್ಗದರ್ಶಕನಿನಗೆ ।
ಸಿದ್ಧವಾಯಿತೆ ಜಟಕಾ ಸಾಬನ ಸಖ್ಯ! ॥
ವೇದಾಂತ ಮಾರ್ಗವನು ತೋರಿಸುವ ತುರಗ! ।
ಸಂಸಾರ ಮಾರ್ಗವನು ತೋರಿಸುವ ವಿಧಿಯೇ! ॥


NO PETROL
RAIL.WA
PLEASE DO NOT TRAVEL BY RAILWAYS
AIR RAID WARNING
R.K.Laxman

ಸಾಕು. ನನಗೊಂದು ಹೆಜ್ಜೆ

ಸಂಗ್ರಾಮ ಸಹಾಯ

ಎಲ್ಲೆಲ್ಲಿ ನೋಡಿದರೂ ಸಂಗ್ರಾಮದ ಮಾತುಗಳೇ. ಯಾರ ಯಾರ ಬಾಯಲ್ಲೂ ಕದನದ ಹರಟೆ. ಕದನವು ನಮ್ಮ ಮನೆಬಾಗಿಲಿಗೆ ಬಂದಿದೆಯೆಂದು ವದಂತಿ. ನಮ್ಮ ಮನೆಯ ಬಾಗಿಲಲ್ಲಿ ಸೈನಿಕರೋಡಾಟವನ್ನು ನೋಡಿದರೆ ಇದೇನೊ ದಿಟವಾಗಿಯೇ ಕಾಣುತ್ತದೆ. ಆದರೆ ಈ ಸೈನಿಕರನ್ನು ನಾವುಗಳೇ ಯುದ್ಧದಲ್ಲಿ ಗೆಲ್ಲಬಹುದೆಂದೂ ತೋರುತ್ತದೆ. ಯಾವ ಪತ್ರಿಕೆಯಲ್ಲೂ ಜಾಹೀರಾತುಗಳು ಸಂಗ್ರಾಮಕ್ಕೆ ಸಹಾಯಮಾಡಿರೆಂದು. ಇವೆಲ್ಲವನ್ನೂ ನೋಡಿದ ಮೇಲೆ ನಾನು ನಿಶ್ಚಯಮಾಡಿದೆ-ನಮ್ಮ ಮಿತ್ರರಾಷ್ಟ್ರಗಳಿಗೆ ಸಹಾಯವನ್ನು ನಾನೂ ಆದಷ್ಟು ಮಟ್ಟಿಗೆ, ಕೈಲಾದ ರೀತಿಯಲ್ಲಿ ಮಾಡೋಣವೆಂದು-ಯಾವ ರೀತಿ ಸಹಾಯ ಮಾಡುವುದು ? ಕೆಲಕಾಲ ಬರೀ-? ಮನಸ್ಸಿನಲ್ಲಿ ರೂಪುಗೊಂಡಿತು. ಕ್ರಮೇಣ ಈ-? ಚಿಹ್ನೆಯು ಮಾಯವಾಗಹತ್ತಿ ಯೋಚನೆಗಳು ಮೂಡಿದುವು.

ಮೊದಲಾಗಿ ಎ. ಆರ್. ಪಿ. ಸಂಸ್ಥೆಗಳಲ್ಲಿ ವಾರ್ಡನ್ ಆಗೋಣವೆಂದುಕೊಂಡೆ. ಹೀಗಾದರೆ ಮನೆಗೆ ಟೆಲಿಫೋನ್ ಸಿಗುವ ಸಂಭವವುಂಟು. ಆದರೆ ಊರಿಗೆ ಊರೇ ಗುಲ್ಲಾಗುವ ಕಾಲದಲ್ಲಿ, ನಾವು ರಸ್ತೆಗಳಲ್ಲಿ ಸಂಚರಿಸುತ್ತ ಜನರಿಗೆ ಧೈರ್ಯ ಹೇಳುವುದು ನನ್ನ ಶಕ್ತಿಮೀರಿದುದು. ಅಲ್ಲದೆ ಮೊದಲಿಂದಲೂ ಈ ವಕ್ರಶಬ್ದಗಳನ್ನು ಕಂಡರೆ ನನಗೆ ಆಗುವುದಿಲ್ಲ. ಹುಡುಗನಾಗಿದ್ದಾಗ ಯಾರಾದರೂ ಬಾಗಿಲ ಹಿಂದೆ ನಿಂತುಕೊಂಡು ನಾನು ಬಂದಾಗ 'ಭೇ' ಎಂದು ಬೆದರಿಸಿದರೆ, ಆ ರಾತ್ರಿ ಛಳಿಜ್ವರ ಬರುತ್ತಿತ್ತು. ದೊಡ್ಡವನಾದಮೇಲೆ ದೀಪಾವಳಿಗೆ ಅತ್ತೆಯ ಮನೆಗೆ ಹೋದಾಗ ಅವರು ಢಂರ ಢಂರ ಶಬ್ದದ ಪಟಾಕಿ ಹತ್ತಿಸಿದಾಗ, ಇನ್ನು ಮುಂದೆ ಈ ಮನೆಗೆ ಬರುವುದಿಲ್ಲವೆಂದು ದೃಢಮಾಡಿದೆ. ಈ ಮಾನಸಿಕ ಬೆಳವಣಿಗೆಯ ನಾನು ಎ. ಆರ್. ಪಿ. ಯಂತ್ರಗಳ ಕೀರಲುಧ್ವನಿಯನ್ನೂ, ಜನರ ಆರ್ತನಾದವನ್ನೂ, ಬಾಂಬುಗಳ ಭೀಕರ ಶಬ್ದವನ್ನೂ, ವಿಮಾನಗಳ ವಿಕಟ ವಾದ್ಯವನ್ನೂ, ತಡೆದುಕೊಂಡು ಕೆಲಸವನ್ನೂ ಮಾಡಬೇಕೆಂದರೆ ಆಗದ ಕೆಲಸ. ಹಾಗಾಗಿ ಈ ಯೋಚನೆಯನ್ನೂ ಬಿಟ್ಟು ಬಿಟ್ಟೆ.

ಮೋಟಾರು ವಾಹನವನ್ನು ನಡೆಸಲು ಒಪ್ಪಿಕೊಳ್ಳೋಣವೇ ಎಂದು ಯೋಚಿಸಿದೆ. ನನಗೆ ಮೋಟಾರು ವಾಹನ ನಡೆಸಲು ಬರುತ್ತಿರಲಿಲ್ಲ. ಆದರೆ ಬೈಸಿಕಲ್ಲು ಕಲಿತವನಿಗೆ ಮೋಟಾರು ಕಷ್ಟವೇ? ಇದನ್ನು ಕಲಿತು ಈ ರೀತಿ ಸಹಾಯ ಮಾಡೋಣವೇ? ನನ್ನ ಸ್ನೇಹಿತನೊಬ್ಬನಿಗೆ ಈ ವಿಷಯವನ್ನು ಹೇಳಿದೆ.

"ನೀನು ಮೋಟಾರು ನಡೆಸಲು ಆರಂಭಿಸಿದರೆ ಬಾಂಬುಗಳಿಗಿಂತ ನಿನ್ನ ಮೋಟಾರೆ ಹೆಚ್ಚು ಅನಾಹುತಗಳನ್ನು ಮಾಡುವುದು. ನೀನು ಶತ್ರುಪಕ್ಷದ ಗೂಢ ಚಾರನೆಂದು ನಮ್ಮವರೆ ನಿನ್ನನ್ನು ಕೊನೆಗಾಣಿಸುವರು. ದಯವಿಟ್ಟು ಈ ಯೋಚ ನೆಯನ್ನು ಬಿಟ್ಟುಬಿಡು" ಎಂದು ಅಧೈರ್ಯಪಡಿಸಿದನು. ಕಂಡೂ ಕಂಡೂ ಈ ಕೆಲಸವೇಕೆ ಎಂದು ಆ ಯೋಚನೆಯನ್ನು ಬಿಟ್ಟೆ. ಈ ಯೋಚನೆಯನ್ನು ಬಿಟ್ಟಿದ್ದರಿಂದಲೇ ನಾನು ರಾಷ್ಟ್ರಸೇವೆಮಾಡಿದಂತಾಯ್ತೆಂದು ನನ್ನ ಸ್ನೇಹಿತನು ಹೇಳಿದನು.

ಅಗ್ನಿ ವಿನಾಶಕ ಸಂಸ್ಥೆಗೆ ಸೇರಿ ಸೇವೆಮಾಡಲೇ ಎಂದು ಯೋಚಿಸಿದೆ. ಹೊಗೆಯನ್ನು ಕಂಡರೆಕೆಮ್ಮು ಬರುವ ದೇಹಸ್ಥಿತಿ ನನ್ನದು. ಬೆಂಕಿಯನ್ನು ಕಂಡರೆ ಬೆಚ್ಚಿಬೀಳುವ ಪ್ರಕೃತಿ. ಧನುರ್ಮಾಸದ ಬೆಳಗ್ಗೆ ಕೂಡ ಬೆಂಕಿ ಮುಂದೆ ಕುಳಿತು ಮೈಕಾಯಿಸಿಕೊಳ್ಳೋಣವೆಂದರೆ ಹೆದರುತ್ತಿದ್ದೆ. ಚಿಕ್ಕವನಾ ಗಿದ್ದಾಗ ಒಮ್ಮೆ ರೈಲಿನಲ್ಲಿ ಹೋಗುತ್ತಿದ್ದೆ, ಇಂಜನ್ನಿನ ಕಿಡಿಯೊಂದು ಕಿಟಕಿಯೊಳ ಗಿಂದ ಒಳಗೆ ಬಂದು ನನ್ನ ಬನಿಯನ್ನಿನ ಮೇಲೆ ಕುಳಿತು ಒಂದು ದೊಡ್ಡ ತೂತನ್ನು ಕೊರೆಯಿತು. ಎದುರಿನಲ್ಲಿದ್ದವರು ಯಾರೊ ನೋಡಿ 'ರೀ ಬೆಂಕಿ' ಎಂದು ನನ್ನ ತಂದೆಗೆ ನನ್ನನ್ನು ತೋರಿಸುತ್ತಾ ಹೇಳಿದರು. ಆಗ ನಾನಿಟ್ಟ ಚೀತ್ಕಾರಕ್ಕೆ-ರೈಲನ್ನೆ ನಿಲ್ಲಿಸಿದರು. ಆ ಕಿಡಿಯೂ ಮಾಯವಾಯಿತು. ಬನೀನೂ ಮಾಯವಾಯಿತು. ಆದರೆ ನನ್ನ ಮನಸ್ಸಿನಲ್ಲಾದ ಪರಿಣಾಮದ ಪ್ರಭಾವ ಇನ್ನೂ ಇಂಗಿಲ್ಲ. ಹೀಗಿರುವಾಗ ನಾನು ಈ ಸೇವೆಯನ್ನು ಕೈಕೊಂಡರೆ, ಬೆಂಕಿ ಆರಿಸುವ ಸಂಭ್ರಮದಲ್ಲಿ, ಬೆಂಕಿ ಹತ್ತಿಸುವ ಪ್ರಮೇಯ ಒದಗಬಹುದೆಂದು ಅನುಮಾನ ಉಂಟಾಯಿತು. ಅಲ್ಲದೆ ನನ್ನ ಜಾತಕದಲ್ಲಿ ಅಗ್ನಿಯಿಂದ ನನಗೆ ಗಂಡಾಂತರವೆಂದು ಹೇಳಲ್ಪಟ್ಟಿತು. ಸುಮ್ಮಸುಮ್ಮನೆ ಅದೃಷ್ಟವನ್ನೇಕೆ ಪರೀಕ್ಷಿ ಸಬೇಕು?

ಪ್ರಥಮ ಚಿಕಿತ್ಸೆಯ ಸ್ವಯಂ ಸೇವಕನಾಗಲೇ? ರಕ್ತವನ್ನು ಕಂಡರೆ ನನ್ನ ರಕ್ತವೆಲ್ಲವೂ ಕುದಿಯುವಂತಾಗುವುದು. ಕರುಳುಗಳನ್ನು ಕಂಡರೆ ನನ್ನ ಕರುಳು ಹೊಟ್ಟೆಯನ್ನು ಬಿಟ್ಟು ಬಾಯಿಗೆ ಬಂದಂತಾಗುವುದು, ಕಡೆಗೆ ಕೆಂಪಾದ ಕಲ್ಲಂಗಡೀ ಹಣ್ಣು ಹೋಳಾಗಿರುವುದನ್ನು ಕಂಡರೆ ತಲೆಗೇರಿ ಬರುವುದು. ಹೀಗಿರುವಾಗ ದಿಟವಾಗಿಯೂ ನಾನು ಪ್ರಥಮ ಚಿಕಿತ್ಸೆಗೆ ಯೋಗ್ಯನೇ? ಪೆಟ್ಟು ತಿಂದವನು ನನ್ನ ಕಾಂತಿಹೀನ ಮುಖವನ್ನು ನೋಡಿಯೇ ಹೆಚ್ಚು ಭಯಪಡು ವನೇ? ಇದರಿಂದ ಕೆಟ್ಟ ಪರಿಣಾಮವಾಗಬಹುದೇ ಆವನ ಚಿಕಿತ್ಸೆಗೆ? ಅಲ್ಲದೆ ನನಗೆ ಚಿಕ್ಕ ಚಿಕ್ಕ ವಿಷಯಗಳ ಮೇಲೆ ಬಹಳ ಜಾಗರೂಕತೆ. ಎಷ್ಟೋ ವೇಳೆ ಚಿಕ್ಕ ವಿಷಯಗಳ ಜಾಗ್ರತೆಯಲ್ಲಿ ದೊಡ್ಡದನ್ನು ಮರತೇ ಬಿಡುತ್ತಿದ್ದೆ. ಹಳೆಯ

ಬಟ್ಟೆಗಳನ್ನು ಸರಿಮಾಡುವ ಹುಮ್ಮಸ್ಸಿನಲ್ಲಿ ಹೊಸ ಬಟ್ಟೆಗಳನ್ನೂ ವಿನಾಶಗೊಳಿಸುತ್ತಿದ್ದೆ. ಹೀಗೆಯೇ ಆದರೆ ಕಾಲು ಮುರಿದುಕೊಂಡವನು ಬಂದಾಗ, ಅದನ್ನು ಮರೆತು ಅವನ ಕೈಗೆ ಬಿದ್ದ ಸಣ್ಣ ಪೆಟ್ಟಿಗೆ ಔಷಧಿ ಹಾಕಲಾರಂಭಿಸಿದರೆ? ಇಂತಹ ಕೆಲಸಗಳೆಲ್ಲಾ ಧೃಢ ಮನಸ್ಕರಿಗೆ, ಊಹಾಪೋಹ ಇಲ್ಲದವರಿಗೆ, ಸಾಮಾನ್ಯ ಜನರಿಗೆ. ಅಂತಾಗಿ ಈ ಯೋಚನೆಯನ್ನೂ ಬಿಟ್ಟೆ.

ಪ್ರಕಟನ ಶಾಖೆಗೆ ಸೇರಿಕೊಂಡು ಎ. ಆರ್. ಪಿ. ವಿಷಯಗಳನ್ನು ಓದಿ ತಿಳಿದುಕೊಂಡು ನಂತರ ಜನ ಜಾಗೃತಿಗೆ ಕೆಲಸ ಮಾಡಲಾಗುವುದೇ! ಒಂದು ಕಡೆ ಕುಳಿತುಕೊಂಡು ಓದುವುದೆಂದರೆ ನನಗೆ ನೀರು ಕುಡಿದ ಹಾಗೆ, ಅದನ್ನು ಬಲು ಸುಲಭವಾಗಿ ಚೆನ್ನಾಗಿ ಮಾಡಬಲ್ಲೆ. ಅಭ್ಯಾಸವಿಲ್ಲದಿದ್ದಲ್ಲಿ ವ್ಯಾಸಂಗಕ್ಕೇನು ಕೊರತೆ. ಇದನ್ನು ಮಾಡಬಹುದು. ಜನರಲ್ಲಿ ಹೋಗಿ ಈ ವಿಷಯಗಳನ್ನು ಹೇಳಿಕೊಡುವುದು ಏನು ಕಷ್ಟ. ಅದೂ ಸಾಧ್ಯ. ದೇವರು ನನಗೆ ತಕ್ಕ ಮಟ್ಟಿಗೆ ಚುರುಕಾದ ಬುದ್ಧಿ ಕೊಟ್ಟಿದ್ದಾನೆ, ರೇ ರಾಜ್ಯ ನಿರ್ಮಾಣಕ ಶಕ್ತಿ ಕೊಟ್ಟಿದ್ದಾನೆ. ಅಂದಮೇಲೆ ಜನರಿಗೆ ಈ ವಿಚಾರಗಳನ್ನು ಹರಡಬೇಕಾದರೆ ನನಗೆ ಹೆಚ್ಚು ಸೌಕರ್ಯ. ವಿಮಾನ ಧಾಳಿಯಾದರೆ ನೀವು ಹೀಗೆ ಹೀಗೆ ಮಾಡಬೇಕು. ಇಲ್ಲದಿದ್ದರೆ ನಿಮ್ಮ ಕಾಲು ಒಡೆದು ಹೋಗುತ್ತೆ. ಹಕಿವಿ ರಿದುಹೋಗುತ್ತೆ, ಮೂಗು ನೆತ್ತರು ಕಾರುತ್ತೆ. ಬುದ್ಧಿ ವಿಕಲ್ಪವಾಗುತ್ತೆ. ಈ ಪಟ್ಟಿಯನ್ನು ನನ್ನ ಊಹೆಗಳಿಂದ ಬೆಳೆಸಬಲ್ಲೆ. ಚೆನ್ನಾಗಿ ಮನದಟ್ಟುವಂತೆ ಮಾಡಬಲ್ಲೆ ಸರಿ. ಇದೇ ನನಗೆ ಸರಿಯಾದ ಕಾರ್ಯ.

ಇದನ್ನು ಮನಸ್ಸಿನಲ್ಲಿಯೇ ದೃಢ ಮಾಡಿಕೊಂಡು, ಎ.ಆರ್.ಪಿ. ಕಂಟ್ರೋಲರಲ್ಲಿಗೆ ಹೋದೆ. ಅವರಿಗೆ ನನ್ನ ಸಾಹಿತ್ಯ ಸೇವೆಯನ್ನು ಅರುಹಿದೆ. ನಾನು ಮಾಡಬೇಕೆಂದಿರುವ ಎ. ಆರ್. ಪಿ. ಪ್ರಕಟಣೆಗಳನ್ನೆಲ್ಲಾ ತಿಳಿಸಿದೆ. ಅವರಲ್ಲಿ ಹೇಳುವಾಗ ರಂಗುರಂಗಾಗಿಯೇ ಬಣ್ಣಿಸಿದೆ, ಕೇಳುವುದನ್ನೆಲ್ಲಾ ಕೇಳಿದ ಮೇಲೆ ಅವರು ಅವಾಕ್ಕಾಗಿ ಕುಳಿತು ತಲೆಯ ಮೇಲೆ ಕೈ ಇಟ್ಟುಕೊಂಡು, ಮುಖವನ್ನು ಉದ್ದ ಮಾಡಿಕೊಂಡು ನನ್ನನ್ನೇ ನೋಡುತ್ತಾ ದೈನ್ಯದಿಂದ ಹೇಳಿದರು. "ಸ್ವಾಮಿ ನೀವು ನನ್ನೆದುರಿಗೆ ಹೇಳಿದಂತೆ ಜನರೆದುರಿಗೆ ಭಾಷಣ ಮಾಡಿದರೆ ಪ್ರತಿ ಒಬ್ಬರೂ ಅಲ್ಲೇ ಕುಗ್ಗಿ ಹೋಗುವರು. ಈ ತೆರನಾದ ಧಾಳಿಯಾದರೆ ನೀವು ಹೇಳಿದಂತೆ ಆಕಸ್ಮಿಕ ಅಪಾಯಗಳಾಗುವುದಾದರೆ, ಮನುಷ್ಯ ಪ್ರಯತ್ನದಿಂದ ಏನೇನೂ ನಡೆಯಲಾರದು. ಸಾಕ್ಷಾತ್ ಪರಮೇಶ್ವರನೇ ಕಾಪಾಡಬೇಕು–ಎಂದು ವೇದಾಂತ ದೃಷ್ಟಿಯನ್ನು ಹೊಂದುತ್ತಾರೆ. ವಿಮಾನಗಳು ಬಂದರೂ ಅವರುಗಳು ತದನಂತರ ರಕ್ಷಣಾ ವ್ಯವಸ್ಥೆಯನ್ನು ಮಾಡಿಕೊಳ್ಳುವುದಿಲ್ಲ. ಅಂದ್ಮೇಲೆ ಎ.ಆರ್.ಪಿ. ಸಂಸ್ಥೆಯೇ ಕಳಚಿ ಬಿದ್ದುಹೋಗುತ್ತದೆ. ದಯವಿಟ್ಟು ಈ

ಕೆಲಸಕ್ಕೆ ಕೈ ಹಾಕಬೇಡಿ. ಶತ್ರುಬಾಂಬುಗಳು ನಮ್ಮ ದೇಹವನ್ನು ಭಿನ್ನಮಾಡುವುದಾದರೆ, ಅದಕ್ಕಿಂತಲೂ ಮಿಗಿಲಾಗಿ ನಿಮ್ಮ ಭಾಷಣವು ನಮ್ಮ ಮನಸ್ಸನ್ನೇ ಖಿನ್ನಮಾಡುವುದು.

ನೀವು ಸಂಗ್ರಾಮಕ್ಕೆ ಸಹಾಯ ಮಾಡಬೇಕೆಂದರೆ ಇದೊಂದು ಸಹಾಯ ಮಾಡಿ. ನೀವು ಬ್ಯಾಂಕಿನಲ್ಲಿಟ್ಟಿರುವ ಹಣದಲ್ಲಿ ಪ್ರತಿ ಸೋಮವಾರದ ದಿನವೂ ಎಷ್ಟು ಚಿಲ್ಲರೆ ಇರುತ್ತದೊ ಅದನ್ನು ಯುದ್ಧ ನಿಧಿಗೆ ಕೊಡಬೇಕೆಂದು ಬ್ಯಾಂಕಿನ ಮ್ಯಾನೇಜರಿಗೆ ಬರೆಯಿರಿ. ಆ ಸಹಾಯವೇ ಸಾಕು. ಈ ಪಟ್ಟಿಯನ್ನು ತೆಗೆದುಕೊಳ್ಳಿ ಇದನ್ನು ಪೂರ್ತಿ ಮಾಡಿ ಬ್ಯಾಂಕಿಗೆ ಕಳುಹಿಸಿ. ಇಲ್ಲವೇ ಯುದ್ಧ ನಿಧಿ ಕಮಿಟಿಗೆ ಕಳುಹಿಸಿ. ಅವರು ಎಲ್ಲವನ್ನೂ ಮಾಡಿಕೊಳ್ಳುತ್ತಾರೆ."

ಅವರು ಹೇಳಿದ್ದು ನ್ಯಾಯವಾಗಿಯೇ ಕಾಣಿಸಿತು. ಅವರ ಸಲಹೆಯಂತೆ ನಾನೂ ಆ ಕಾಗದವನ್ನು ಬರೆದು ಯುದ್ಧನಿಧಿ ಕಛೇರಿಗೆ ಕಳುಹಿಸಿದೆ. ಅವರಿಂದ ಧನ್ಯವಾದದ ಕಾಗದವೂ ನನಗೆ ಬಂತು. ಹೀಗೆ ಮಾಡಿದ್ದರಿಂದ ನಾನು ಸಹಾಯ ಮಾಡಿದಂತೆಯೂ ಆಯಿತು, ಹಣವೂ ಮಿಗಿತು ಎಂದುಕೊಂಡಿದ್ದೆ. ಏಕೆಂದರೆ ಆ ಬ್ಯಾಂಕಿನಲ್ಲಿ ನನ್ನ ಲೆಕ್ಕವೆಲ್ಲವೂ ಸಾಲದ ಲೆಕ್ಕವೇ. ನಾನು ಲೆಕ್ಕ ಆರಂಭಿಸಿದ ಮಾರನೆಯ ದಿನದಿಂದ ಬರೀ ಕೆಂಪುಶಾಯಿನ ಅಂಕಿಗಳೇ ವಿನಹಾ,ಜಮಾ ಕಡೆಗೆ ತೂಕವೇ ಏರಿದ್ದಿಲ್ಲ. ಅಂದ ಮೇಲೆ ಸೋಮವಾರದ ದಿನದ ಚಿಲ್ಲರೆ ಹಣವನ್ನು ಯುದ್ಧ ನಿಧಿಗೆ ಕೊಡಿ ಅಂದರೆ ಯುದ್ಧ ನಿಧಿಯವರೇ ಆ ಚಿಲ್ಲರೆ ಸಾಲವನ್ನು ತೀರಿಸುತ್ತಾರೇನೋ ಎಂದುಕೊಂಡಿದ್ದೆ.

ಆದರೆ ನೋಡಿ ನಾವೊಂದು ಯೋಚಿಸಿದರೆ ಹಿಂದೆಯೇ ದೈವವೊಂದು ಯೋಚಿಸುವುದು. ಈ ಬ್ಯಾಂಕಿನವರೂ ಯುದ್ಧನಿಧಿಯವರೂ ಒಂದೇ ಗೋತ್ರದವರು ಎಂದು ಕಾಣುತ್ತೆ. ಪ್ರತಿ ಸೋಮವಾರವೂ ಸಾಲದ ಚಿಲ್ಲರೆಯಾದ ಹನ್ನೆರಡೂಕಾಲಾಣೆಯನ್ನು ಬ್ಯಾಂಕಿನವರು ಯುದ್ಧನಿಧಿಗೆಂದು ಲೆಕ್ಕಹಾಕಿಕೊಂಡು, ಆ ಹನ್ನೆರಡು ಕಾಲಾಣೆಯನ್ನು ನನ್ನ ಲೆಕ್ಕಕ್ಕೆ ಸಾಲವಾಗಿ ಸೇರಿಸಹತ್ತಿದರು. ಇದು ಮೂರು ತಿಂಗಳಾದ ಮೇಲೆ ಗೊತ್ತಾಯಿತು.

ಆದರೂ ಪರವಾಗಿಲ್ಲ. ಬ್ಯಾಂಕಿನವರು ಸಾಲವನ್ನು ಇನ್ನುಮೇಲೆ ಕೊಡಲಾಗುವುದಿಲ್ಲ ಎಂದು ಖಡಾ ಖಂಡಿತವಾಗಿ ಹೇಳಿದ್ದರು. ಈ ನೆಪದಿಂದಲಾದರೂ ಸಾಲವನ್ನು ಕೊಟ್ಟರಲ್ಲಾ. ಇದನ್ನೇ ರೂಢಿಯನ್ನಾಗಿ ಅನುಸರಿಸಿ ನಾನು ಇನ್ನೂ ಸ್ವಲ್ಪ ಸಾಲ ಕೇಳುತ್ತೇನೆ.

ಯುದ್ಧ ಸೇವೆಯಾಯ್ತು. ಬ್ಯಾಂಕಿನಲ್ಲಿ ಹೆಚ್ಚು ಸಾಲ ಪಡೆದಂತಾಯಿತು—ಇನ್ನೇನು ಬೇಕು ?

ರಾಜೀವಪುರದ ರಾಜಕೀಯ

ರೈಲ್ವೆ ಮಾರ್ಗದರ್ಶಕ

ರಾಜೀವಪುರದಿಂದ ನೂರು ಮೈಲಿ ದೂರದಲ್ಲಿದ್ದ ವ್ಯಾಪಾರ ಕೇಂದ್ರವಾದ ಹೆಬ್ಬಿಗುಬ್ಬಾಲೆಗೆ ರೈಲು ಹಾಕಲೇಬೇಕೆಂದು ಹಲವಾರು ವರ್ಷಗಳಿಂದಲೂ ಪ್ರಜಾ ಸಭೆಯು ಒತ್ತಾಯ ಪಡಿಸುತ್ತಿತ್ತು. ಪ್ರಜಾ ಸಭೆಯ ಕಾರ್ಯದರ್ಶಿಗಳು ಚಾಚೂ ತಪ್ಪದೆ ಈ ಠರಾವುಗಳನ್ನು ಅಚ್ಚು ಮಾಡಿಸಿ, ತಾರೀಖುವಾರ್ ವಿಂಗಡಿಸಿ, ಗೂಡಿನಲ್ಲಿಟ್ಟು ಬೀಗ ಹಾಕುತ್ತಿದ್ದರು. ವರ್ಷ ವರ್ಷಕ್ಕೂ ಈ ಠರಾವು ಪುಸ್ತಕಗಳು ವೃದ್ಧಿಯಾಗುತ್ತಾ ಇದ್ದುವು.

ಈ ವರ್ಷ ರೈಲ್ವೆ ಮಂತ್ರಿಗಳು ಹೊಸದಾಗಿ ನಿಯಮಿಸಲ್ಪಟ್ಟರು. ಅವರು ಹೆಬ್ಬಿಗುಬ್ಬಾಲೆಯ ಹೆಣ್ಣನ್ನು ಮದುವೆಯಾಗಿದ್ದರು, ವರ್ಷಾಂತರಗಳ ಹಿಂದೆ. ರೈಲ್ವೆ ಮಂತ್ರಿಗಳೆಂದರೆ, ಹೊಸದಾದ, ಅವರಿಗೇ ಮೀಸಲಾಗಿರುವ ರೈಲು ಗಾಡಿಯೊಂದಿರುವುದು. ಮಂತ್ರಿ ಮಡದಿಗೆ ಈ ಗಾಡಿಯಲ್ಲಿ ಕುಳಿತುಕೊಂಡು ತಮ್ಮೂರಿಗೆ ಹೋಗಬೇಕು, ಅಲ್ಲಿ ತಮ್ಮ ಪರಿಚಯಸ್ಥ ಹೆಂಗಸರೆದುರಿಗೆ ಸುಮಾನ ಪಡಬೇಕು ಎಂಬ ಹಂಬಲು ವಿಪರೀತವಾಗಿತ್ತು. ಊಟ ಮಾಡುವಾಗಲೂ ವೀಳಯವನ್ನು ಹಾಕಿಕೊಳ್ಳುವಾಗಲೂ, ಕಛೇರಿಗೆ ಹೊರಡುವಾಗಲೂ, ಹಿಂತಿರುಗಿ ಬಂದಾಗಲೂ ಮತ್ತು ಯಾವಾಗಲೂ ಮಂತ್ರಿಗಳಿಗೆ ಈ ಹಂಬಲು ಸೂಚಿಸಲ್ಪಡುತ್ತಿತ್ತು. ಹಾಗಾಗಿ ಮಂತ್ರಿಗಳು ನಿರ್ಧರಿಸಿದರು, ಹೆಬ್ಬಿಗುಬ್ಬಾಲೆಗೆ ರೈಲು ಹಾಕಿಸಿಯೇ ಬಿಡಬೇಕೆಂದು, ಮಂತ್ರಿ ಪದವಿಯು ಮುಗಿಯುವುದರೊಳಗೇ ಈ ರೈಲು ಸ್ಥಾಪನೆಯಾಗಬೇಕೆಂದು.

ಸರಿ, ಪ್ರಜಾ ಸಭೆಯು ಎಂದಿನಂತೆ ಈ ವರ್ಷವೂ ಸೇರಿತು. ಕಾರ್ಯದರ್ಶಿಗಳು ಗೂಡಿನ ಬೀಗ ತೆಗೆದು, ಠರಾವುಗಳ ಹೊಸ ಪುಸ್ತಕ ಒಂದಕ್ಕೆ ಸ್ಥಳ ಮಾಡತೊಡಗಿದರು. ಆದರೆ ನೋಡಿ, ಪ್ರಜೆಗಳೆಲ್ಲರೂ ಹೆಬ್ಬಿಗುಬ್ಬಾಲೆಗೆ ರೈಲು ಬೇಕು ಎಂದು ಠರಾವು ಅನುಮೋದಿಸಿದ ಕೂಡಲೇ ರೈಲ್ವೆ ಮಂತ್ರಿಗಳೆದ್ದು, "ಹೌದು ಇದು ಅತ್ಯಗತ್ಯ. ಹೆಬ್ಬಿಗುಬ್ಬಾಲೆಯ ಆಮದು ಇಷ್ಟು, ರಫ್ತು ಅಷ್ಟು. ಅಲ್ಲಿಗೆ ಬಸ್ಸುಗಳು ಇಷ್ಟು, ವ್ಯಾಪಾರ ಅಷ್ಟು. ಈ ರೈಲ್ವೆ ಹಾಕಿದರೆ, ಅದರ ಖರ್ಚೆಲ್ಲವೂ ಐದು ವರ್ಷಗಳಲ್ಲಿಯೇ ನಮಗೆ ಹಿಂತಿರುಗಿ ಬರುತ್ತದೆ. ಅಲ್ಲದೆ ರಾಜ್ಯದ ಐಶ್ವರ್ಯವು ಇಮ್ಮಡಿಯಾಗುತ್ತದೆ" ಎಂದು ಬೇಕಾದಷ್ಟು ಅಂಕಿಗಳ ಸಹಾಯದಿಂದ, ವಿಶದೀಕರಿಸಿದರು.

ಸಭಾ ಸದಸ್ಯರೆಲ್ಲರಿಗೂ ಮೂರ್ಛೆ ಬಂದಂತಾಯಿತು. ಇದೇ ಶತಮಾನ

ದಲ್ಲಿ ಪ್ರಜಾಭಿಪ್ರಾಯವನ್ನು ಮಂತ್ರಿಗಳ ಲ್ಲೊಬ್ಬರು ಮನ್ನಣೆಮಾಡಿದ್ದು ಇದೇ ಮೊದಲು. ಇನ್ನು ಸದಸ್ಯರು ನೀರಸ ರಾಗುವುದೇನು ಹೆಚ್ಚು. ಅಂತೂ ರೈಲು ಹಾಕಬೇಕೆಂದು ಸರಕಾರವೂ ಅನುಮೋದಿಸಿತು. ಅಲ್ಲದೆ. ಆರು ತಿಂಗಳಲ್ಲಿಯೇ ಈ ರೈಲ್ವೆಯನ್ನು ಎಲ್ಲೆಲ್ಲಿ ಹಾಕಬೇಕು, ಎಲ್ಲೆಲ್ಲಿ ಸ್ಟೇಷನ್ನುಗಳನಿಡಬೇಕು, ಎಷ್ಟು ಖರ್ಚು ಆಗಬಹುದು, ಇವೆಲ್ಲವನ್ನೂ ತಯಾರಿಸಬೇಕೆಂದೂ ನಿರ್ಧಾರವಾಯಿತು.

ರೈಲ್ವೆ ಮಂತ್ರಿಗಳು ಆ ಕಛೇರಿಯಲ್ಲಿ ಹುಕುಮಿತ್ತು ಮನೆಗೆ ಬಂದರು. ಬಂದವರೇ ಸುಧಾರಿಸಿಕೊಂಡು ಊಟಕ್ಕೆ ಕುಳಿತರು, ಅನ್ನ ಸಾರು, ಈರುಳ್ಳಿ ಹುಳಿ, ನಾಲ್ಕು ಬಗೆ ಪಲ್ಯ, ಎರಡು ತೆರನಾದ ಕೂಟು,ಕೋಸುಂಬರಿ, ಪಾಯಸ, ಜಿಲೇಬಿ, ಬಕಾಳಾಭಾತ್, ಎಲ್ಲವೂ ಒಂದೊಂದಾಗಿ ಬಂದುವು. ಮಂತ್ರಿಗಳು ಮಡದಿಯನ್ನು ಕರೆದು ಸನ್ನೆ ಮಾಡಿ ಕೇಳಿದರು "ಇದೆಲ್ಲಾ ಏನು, ಯಾರ ಹುಟ್ಟಿದ ಹಬ್ಬ" ಎಂದು. ಸಡಗರದಿಂದ ಬಳುಕುತ್ತಾ ಮಡದಿಯು ಹೇಳಿದಳು. "ನೀವು ಸಭೆಯಲ್ಲಿ ಹೆಬ್ಬಿ ಗುಬ್ಬಾಲಿಗೆ ರೈಲು ಹಾಕಬೇಕೆಂದು ಹೋರಾಡಿದ್ದು ಆಗಲೇ ತಿಳಿಯಿತು, ನಮ್ಮ ತೌರು ಮನೆಗೆ ರೈಲು ಹುಟ್ಟಿದ ಹಬ್ಬ. ಆದಕ್ಕಾಗಿ ನಿಮಗೆ ಔತಣ"

ಪ್ರಜಾಸಭೆಯ ಸದಸ್ಯರೆಲ್ಲರೂ ಅಂದು ಸಾಯಂಕಾಲ ಒಂದು ಘೋಷಣೆಯನ್ನು ಪ್ರಕಟಿಸಿದರು, "ಪ್ರಜಾವರ್ಗದಿಂದ ಚುನಾಯಿಸಲ್ಪಟ್ಟ ನಾವು ಕೆಲವು ಕಾಲದಿಂದಲೂ ಕಷ್ಟಪಟ್ಟು ಇಂದು ಹೆಬ್ಬಿ ಗುಬ್ಬಾಲಿಗೆ ರೈಲು ಹಾಕಿಸಿದ್ದೇವೆ." ಎಂದು.

ಅಂತೂ ಇಂತೂ ಹೆಬ್ಬಿ ಗುಬ್ಬಾಲಿಗೆ ರೈಲು ಬಂತು, ಅಥವಾ ಬರುವುದಕ್ಕೆ ಆರಂಭಿಸಿತು. ಯಾವ ಮಾರ್ಗದಲ್ಲಿ ರೈಲು ಹಾದಿಯನ್ನು ಹಾಕಬೇಕೆಂಬುದಕ್ಕೆ ಇಂಜನಿಯರೊಬ್ಬರನ್ನು ನೇಮಿಸಬೇಕಾಯಿಯಿತು, "ಅನುಭವವುಳ್ಳ ಇಂಜನೀಯರು, ಇಂತಹ ಪ್ರಶಸ್ತಿಗಳನ್ನು ಹೊಂದಿರುವವರು" ಬೇಕು ಎಂದು ಸರಕಾರದ ಜಾಹೀರಾತು ಹೊರಟಿತು. ಇಂಜನಿಯರಿಗೆ ನೂರೇ ರೂಪಾಯಿ ಸಂಬಳ. ಬೇಕಾದ ಪ್ರಶಸ್ತಿಗಳೋ ಬೇಕಾದಷ್ಟು. ಯಾರು ಬರುತ್ತಾರೆ ಈ ಕೆಲಸಕ್ಕೆ ಅನ್ನಿಸುತ್ತಿತ್ತು. ವಿಚಾರಿಸಿದಲ್ಲಿ ಗೊತ್ತಾಯಿತು ನೂರು ಅರ್ಜಿಗಳು ಬಂದಿದ್ದವೆಂದು. ನನಗೆ ಆಶ್ಚರ್ಯ. ಈ ಅಲ್ಪ ಸಂಬಳಕ್ಕೆ ಇಷ್ಟು ವಿದ್ಯಾವಂತರು ಅನುಭವಸ್ಥರು ಬರುತ್ತಾರೆಯೇ ಎಂದು. ಆ ವೇಳೆಗೆ ರೈಲ್ವೆ ಕಛೇರಿಯಿಂದ ನನ್ನ ಸ್ನೇಹಿತನೊಬ್ಬನು ಹೊರಗೆ ಬಂದ. ಬಂದವನೇ ನನ್ನನ್ನು ನೋಡಿ, ಏನಯ್ಯಾ ಇಷ್ಟು ದೂರ ಬಂದೆ ಎಂದು ಕೇಳಿದ. ನನ್ನ ಸಂದೇಹವನ್ನು ಅವನಿಗೆ ಹೇಳಿದೆ. "ಅಯ್ಯೋ-ಪಾಪಿ, ನಿನಗೊಂದೂ ತಿಳಿಯುವುದಿಲ್ಲ. ತೋಳ ಕುರಿಗಳನ್ನು ಕಾದ ಹಾಗೆ ಆ ಕೆಲಸ. ಸಂಬಳವಿಲ್ಲದೆ ಎಷ್ಟೋ ಜನರು ಆ ಕೆಲಸವನ್ನು ಮಾಡಲು ಸಿದ್ಧ" ಎಂದು ಹೇಳಿದ.

"ಹಾಗೆ ಮಾಡಿದರೆ ತನಿಖೆ ಮಾಡುವುದಿಲ್ಲವೇ, ಸಿಕ್ಕಿ ಹಾಕಿಕೊಂಡರೆ ಕೆಲಸ ತೆಗೆದುಬಿಡುತ್ತಾರಲ್ಲ" ಎಂದೆ.

"ಮಂಕೇ-ಹಾಗಲ್ಲ ಕೇಳು ಜೀವಾವಧಿ ಕೆಲಸ ಮಾಡಿದರೆ ಎಷ್ಟು ಹಣ ಸಿಗುತ್ತೊ ಅಷ್ಟನ್ನೂ ಆರೇ ತಿಂಗಳಲ್ಲಿ ಸಂಪಾದಿಸಿದರೆ ಆಮೇಲೆ ಕೆಲಸ ಹೋದರೇನೊ, ಅಲ್ಲದೆ ಹೀಗೆ ಮಾಡುವವರು ಸಿಕ್ಕಿಹಾಕಿಕೊಳ್ಳುವುದಿಲ್ಲ. ಬುದ್ಧಿಶಾಲಿಗಳು. ನೀನು ಏನೂ ಅರಿಯದವನು, ಒಂದು ದೃಷ್ಟಾಂತ ಹೇಳುತ್ತೇನೆ ಕೇಳು. ಮಸಲ ನಾನು ಇಂಜನಿಯರಾದೆ ಅಂತ ಇಟ್ಟುಕೊ, ನಾನು ರೈಲು ಹಾದಿ ಹಾಕಲು ಸರ್ವೆ ಮಾಡಲು ಹೊರಡುತ್ತೇನೆ. ಊರ ಬಿಟ್ಟ ಅರ್ಧ ಮೈಲಿಯಲ್ಲಿ ತೋಟಗಳು ಜಮೀನುಗಳೂ ಸಿಗುತ್ತವೆ. ನನ್ನ ಕೆಲಸ ನಾನು ಮಾಡಿಕೊಳ್ಳುತ್ತ ಯಾವ ದಾರಿಯಲ್ಲಿ ರೈಲು ಹೋಗಲು ಅನುಕೂಲವೋ ಅದರ ನಕ್ಷೆಯನ್ನು ಬರೆದುಕೊಳ್ಳುತ್ತಾ ಹೋಗುತ್ತೇನೆ. ಪಕ್ಕದಲ್ಲಿ ಒಂದು ಫಲವತ್ತಾದ ಬಾಳೆಯ ತೋಟ ಇದೆ ಅನ್ನು. ನಾನು ಸುಮ್ಮನಿರದೆ ಆ ತೋಟದ ಮೇಲೆ ನಡೆದುಹೋಗುತ್ತೇನೆ. ಜವಾನರ ಕೈಲಿ ಕಬ್ಬಿಣದ ಸರಪಳಿಯನ್ನು ಎಳೆಸುತ್ತೇನೆ. ತೋಟದ ಮಧ್ಯದಲ್ಲಿ ಒಂದು ಕೋಲನ್ನು ನೆಡುತ್ತೇನೆ. ಈ ವೇಳೆಗೆ ತೋಟದವನಿಗೆ ಗುಮಾನಿ. ಬಂದು ಕೇಳುತ್ತಾನೆ. 'ಏನು ಸಾರ್ ಇದೆಲ್ಲಾ' ಎಂದು, 'ಇಲ್ಲಿ ರೈಲು ಮಾರ್ಗ ಬರುತ್ತಯ್ಯಾ, ನೀನೇನು ಹೆದರಬೇಡ ನಿನ್ನ ಜಮೀನನ್ನು ಪೂರ್ತಿ ತೆಗೆದುಕೊಳ್ಳುವುದಿಲ್ಲ. ಸುಮಾರು ಹತ್ತುಗಜ ಅಗಲ ನೂರು ಗಜ ಉದ್ದ ತೆಗೆದುಕೊಳ್ಳುತ್ತೇವೆ ಅದಕ್ಕೆ ಪರಿಹಾರ ದ್ರವ್ಯವನ್ನೂ ಕೊಡುತ್ತೇವೆ' ಎಂದು ನಯವಾಗಿ ಹೇಳುತ್ತೇನೆ. ಅವನ ಎದೆ ಹಾರಿಹೋಗುತ್ತೆ. ತೋಟದ ಮಧ್ಯದಲ್ಲಿ ಒಂದು ತಿರುಪತಿ ಪಟ್ಟೆ ತೆಗೆದರೆ ನೀರು ಹಾಕುವುದು ಹೇಗೆ, ಕುಯ್ಲು ಮಾಡುವುದು ಹೇಗೆ, ಒಲ ತಾಯಿ ಕತೆಯಲ್ಲಿ ಮಗುವನ್ನು ಹಂಚಿ ಕೊಟ್ಟ ಹಾಗೆ.

ಆ ಸಾಯಂಕಾಲ ತೋಟಗಾರನು ಯಾರಿಗೂ ಕಾಣದಂತೆ ನನ್ನ ಬಿಡಾರಕ್ಕೆ ಬರುತ್ತಾನೆ. ಯಾರಿಗೂ ತಿಳಿಯದಂತೆ ಅವನ ಶಕ್ತಿಗನುಸಾರ ಮರ್ಯಾದೆ ಮಾಡುತ್ತಾನೆ. ಅವನ ತೋಟ ಅದರ ಮೂಲಕ ಅವನ ಮನೆ ಮಕ್ಕಳನ್ನು ಉದ್ಧಾರ ಮಾಡಬೇಕೆಂದು ಅಂಗಲಾಚಿ ಬೇಡಿಕೊಳ್ಳುತ್ತಾನೆ. ನಾನೂ ಅವನ ಮರ್ಯಾದೆಯನ್ನು ಸ್ವೀಕರಿಸಿ, ಅವನಿಗೆ ಅಭಯವನ್ನಿತ್ತು, ನನ್ನ ಹಾದಿಯಲ್ಲಿ ನಾನು ಹೋಗುತ್ತೇನೆ. ಹೀಗೆ ಮಾಡಿದರೆ ಸಿಕ್ಕಿಹಾಕಿಕೊಳ್ಳುವುದೆಲ್ಲಿ ? "

ನನಗೆ ತಲೆ ಕೆರೆದುಕೊಳ್ಳುವಂತಾಯಿತು "ಅಯ್ಯಾ ನೀನು ಇಂಜನಿಯರಾಗದೆ ಇರುವುದು ಒಳ್ಳೆಯದು, ಊರಿಗೆ ಊರೇ ಹಾಳಾಗುತ್ತಿತ್ತು" ಎಂದು ಹೇಳಿ ಹಿಂತಿರುಗಿ ಬಂದೆ.

ಬರುವಾಗ ಯೋಚಿಸಿದೆ. ಇವನಲ್ಲದೇ ಇದ್ದರೆ ಇವನ ಸ್ನೇಹಿತ ಇನ್ನೊಬ್ಬ. ಏನು ಉಳಿದಹಾಗಾಯಿತು ಎಂದು.

ಇವಾದ ಎರಡು ವರ್ಷಗಳಲ್ಲಿಯೇ

ರೈಲು ಹಾದಿಯೂ ಸಿದ್ಧವಾಯಿತು. ನಾನು ಆ ರೈಲಿನಲ್ಲಿ ಒಮ್ಮೆ ಹೆಬ್ಬಿ ಗುಬ್ಬಾಲಿಗೆ ಹೋದೆ. ನೋಡಿ ಆ ರೈಲ್ವೆ ಮಾರ್ಗದರ್ಶಕನ ಕುತಂತ್ರವು ಗೊತ್ತಾಗಿತ್ತು ಎಂದು ಕಾಣುತ್ತೆ, ರೈಲ್ವೆ ಸ್ಥಾಪನೆಯಾದ ಮರ್ಮವೂ ತಿಳಿದಿತ್ತು ಎಂದು ಕಾಣುತ್ತೆ. ಅದನ್ನು ನೆನೆಸಿಕೊಂಡು ನೆನೆಸಿಕೊಂಡು, "ಹುಶ್ಶೋ, ಅಪ್ಪ, ಹುಶ್ಶಪ್ಪ, ಎಂದು ನಿಟ್ಟುಸಿರು ಬಿಡುತ್ತಾ ಹೋಗುತ್ತಿತ್ತು. ಇಂದಿಗೂ ಹಾಗೆಯೇ ಬೇಕಾದರೆ ನೀವು ಆ ರೈಲಿನಲ್ಲಿ ಕುಳಿತು ಎಂಜಿನ್ನು ನಿಟ್ಟುಸಿರು ಬಿಡುವುದನ್ನು ನೋಡಿ "ಹುಶ್ಶೋ, ಅಪ್ಪ ಹುಶ್ಶಪ್ಪ"—

ನವೀನ ಗಾದೆಗಳು-ಸಂಗ್ರಾಮದವು

ಸಾವಿರ ಕುಮರಿ ಸರದಾರನಾದರೆ
ಅಷ್ಟು ಬೇಗ ಹಿಂದೋಡಲಾಗುವುದೇ ?

* * *

ಇಳಿದಮೇಲೆ ಯುದ್ಧಕ್ಕೆ
ಛಳಿಯಾದರೇನು ಗಾಳಿಯಾದರೇನು ?

* * * *

ಸೈನ್ಯಕ್ಕೆ ಸೇರಿದಾಕ್ಷಣವೇ
ಬಿಳಿ ಕುಮರಿ ಸವಾರಿ ಮಾಡಲೇಬೇಕೆಂದು?

* * *

ಯಾಕೋ ಸಿಪಾಯಿ ! ತಾರಾಟ, ಎಂದರೆ.
ಮೇಜರ್ ಮನೆಯಲ್ಲಿ ಕುಡಿದಾಟ.

* * *

ಸಾಯೋ ಮುದುಕನ್ನ ಸಾರ್ಜೆಂಟ್ ಮಾಡಿದರು

* * *

ಕೆಮ್ಮಿದರೆ ಕೆಳಗೆ ಬೀಳೋ ಸಿಪಾಯಿ
ಗುದ್ದಿದರೆ ಬದುಕಾನೇ ?

* * *

ಊಟ ಬಲ್ಲವಗೆ ರೋಗವಿಲ್ಲ
ಓಟ ಬಲ್ಲವಗೆ ಜಗಳವಿಲ್ಲ.

ನೀತಿಯ ಕತೆಗಳು—ಬಲಿತವರಿಗೆ

ಒಬ್ಬ ವ್ಯಾಕರಣಿಯು ಊರಾಚೆ ಸಂತೆಗೆ ಹೋದನು. ಸಂತೆಯಲ್ಲಿ ಒಬ್ಬ ದೃಢಕಾಯನು "ಮನುಷ್ಯನಲ್ಲಿ ವ್ಯತ್ಯಾಸ ತೋರಿಸಬಾರದು ವ್ಯಾಪಾರ ಮಾಡು ವಾಗ'' ಎಂದು ಅಂಗಡಿಯವನಿಗೆ ಹೇಳುತ್ತಿದ್ದನು. ವ್ಯಾಕರಣಿಯು ಅವರ ಹತ್ತಿ ರ ಹೋಗಿ "ಮನುಷ್ಯನಲ್ಲಿ ವ್ಯತ್ಯಾಸ ತೋರಿಸುವುದು ಹೇಗೆ" ಎಂದನು. ದೃಢ ಕಾಯನು 'ಹೀಗೆ' ಎಂದು ಅಪ್ಪಳಿಸಿ ಹೊಡೆದನು.

ನೀತಿ—'ಪ್ರಾಣಿಗಳಲ್ಲಿ ದಯೆಯಿಡು."

* * *

ಬಲು ಸ್ಥೂಲಕಾಯನೊಮ್ಮೆ ಸಂತೆಗೆ ಹೋಗಬೇಕಾಗಿತ್ತು. ಕಾಲಿಗೆ ಹಾಕಿದ್ದ ಚಡಾವಿಗೆ ರಂಗು ಸಾಲದೇನೊ ಎಂಬ ಅನುಮಾನವು ಬಂತು. ಆದರೆ ಹೊಟ್ಟೆಯ ಆಕಾರದಿಂದ ಅವನೇ ಚಡಾವನ್ನು ನೋಡಲಾರದೆ ಹೋದನು. ಚಮ್ಮಾರನ ಹತ್ತಿರ ಹೋಗಿ ಕೇಳಲು ಚಮ್ಮಾರನು ಬಣ್ಣ ಹಾಕಲೇಬೇಕೆಂದ ಹೇಳಿದನು.

ನೀತಿ—ನಿಮ್ಮ ಕೆಲಸಗಳನ್ನು ನೀವು ಮಾಡಲು ಸಾಧ್ಯವಾದರೆ, ಲಾಯ ರಿನ ಹತ್ತಿರ ಹೋಗಿ.

* * *

ಉಡುಪಿ ಹೋಟಲಿನಲ್ಲಿ ಒಬ್ಬ ಬ್ರಾಹ್ಮಣನಿದ್ದನು. ಈ ಊರಿಗೆ ಅದೊಂ ದೇ ಹೋಟಲು. ಆ ಹೋಟಲಿನಲ್ಲಿ ದೋಸೆಗಳಿಗೆ ಕೋಳಿಮೊಟ್ಟೆ ಹಾಕುತ್ತಾ ರೆಂದು ಬ್ರಾಹ್ಮಣನಿಗೆ ಯಾರೋ ಹೇಳಿದರು. ಮಾರನೇ ದಿನದಿಂದ ತಾನೇ ಅಡಿಗೆ ಮಾಡಿ ಉಣ್ಣಲಾರಂಭಿಸಿದನು. ಒಂದು ವಾರದಲ್ಲಿ ಹೊಟ್ಟೇನೋವು ಬಂದು ಪರಿಣಾಮಶೂಲೆಯಾಗಿ ಪರಿಣಮಿಸಿತು. ವೈದ್ಯನಲ್ಲಿಗೆ ಹೋದ ಕೂಡಲೇ ಸ್ವರ್ಗಸ್ಥನಾದನು.

ನೀತಿ—ಹೆಚ್ಚು ಜನರ ಅಭಿಮತದಂತಿರಬೇಕು

ಅಥವಾ

ಮೈನಾರಿಟಿಗಳು ಕಷ್ಟಪಡಲೇಬೇಕು.

* * *

ಒಂದೂರಿನಲ್ಲಿ ಚೋರನೆಂಬುವನಿದ್ದನು. ಅವನ ಮನೆಯಲ್ಲಿ ಬಿಳಿಯ ನೋಟಗಳು ಎಂಬ ಪುಸ್ತಕ ಒಂದಿತ್ತು. ಒಂದು ದಿನ ಬಿಳಿಯ ನೋಟಗಳ ಗ್ರಂಥಕರ್ತರು ಆ ಊರಿಗೆ ಹೋದರು. ಚೋರನು ಊರಿನ ಗೌಡನಾದವ

ರಿಂದ ಅವನ ಮನೆಗೆ ಹೋದರು. ಅಲ್ಲಿ ತಮ್ಮ ಪುಸ್ತಕವನ್ನು ನೋಡಿ 'ಗೌಡರೇ, ಈ ಪುಸ್ತಕವನ್ನು ನೀವು ಇಟ್ಟುಕೊಂಡಿರುವುದು ನನಗೆ ಬಹಳ ಮೆಚ್ಚುಗೆ' ಎಂದರು. ಆ ಮೆಚ್ಚಿಗೆಯನ್ನು ತೋರಿಸಲೋಸುಗ ಗೌಡನಿಗೆ ಹತ್ತು ರೂಪಾಯಿ ಬಹುಮಾನ ಕೊಟ್ಟು ಹೊರಟುಹೋದರು. ಇದು ಯಾವ ಪುಸ್ತಕ ಎಂದು ಗೌಡನು ಆ ಪುಸ್ತಕವನ್ನು ತೆರೆದನು. ತನ್ನ ಮಗನು ಒಂದು ಖಾಲಿ ಹಾಳೆಯ ಪುಸ್ತಕಕ್ಕೆ ವಿಳ್ಳೆಯ ನೋಟಗಳ ಅಟ್ಟೆಯನ್ನು ಹಾಕಿ ಹೊಲಿದುಕೊಂಡಿದ್ದನು.

ನೀತಿ—ಬೇರೆಯವರು ನಿನ್ನನ್ನು ಶ್ಲಾಘಿಸಬೇಕಾದರೆ ನೀನೆ ನಿನ್ನ ಹುತೂರಿ ಊದು.

* * *

ಒಂದೂರಿನಲ್ಲಿ ಒಬ್ಬ ದೇಶ ಸೇವಕನಿದ್ದನು. ಅವನ ಮನೆಗೆ ರಾತ್ರಿ ಒಬ್ಬ ಕಳ್ಳನು ಕನ್ನ ಹಾಕಿದನು. ಸಂದೂಕವನ್ನು ಒಡೆಯುವ ವೇಳೆಗೆ ದೇಶ ಸೇವಕನು ಎಚ್ಚೆತ್ತನು. ಆಗ ಆತನಿಗೆ ನಿದ್ರೆ ಚೆನ್ನಾಗಿ ಬಂದಿತ್ತಿಲ್ಲ. ಏಕೆಂದರೆ ನಾರನೆಯ ದಿನ ಆತನು ಒಂದು ಉಪನ್ಯಾಸವನ್ನು ಬಹಿರಂಗ ಸಭೆಯಲ್ಲಿ ಕೊಡಬೇಕಾಗಿತ್ತು. ಎಚ್ಚೆತ್ತಮೇಲೆ ಉಪನ್ಯಾಸವನ್ನು ಗಟ್ಟಿಮಾಡಲು ಆರಂಭಿಸಿದನು. ಒಂದಾವರ್ತಿ ಹೇಳಿದ್ದಾಯಿತು. ಎರಡಾವರ್ತಿ ಹೇಳಿದ್ದಾಯಿತು. ಮೂರನೆಯ ಸಾರಿ ತಿರುಗಿ ಹೇಳಲಾರಂಭಿಸಿದನು. ಮಧ್ಯೆ ಒಂದು ಮಾತು ತೊದಲಿತು. ಆಗ ಕೈ ಕಾಲು ತೊಳೆದುಕೊಂಡು ಬರಲು ಹೊರಗೆ ಹೋದನು. ಆಗ ಕಳ್ಳನು ಬೇಗ ಮನೆಯಿಂದಾಚೆ ಓಡಿಹೋದನು. ಈ ಉಪನ್ಯಾಸವನ್ನು ತಿರುಗಿ ತಿರುಗಿ ಕೇಳುವುದಕ್ಕಿಂತ ಕಳ್ಳತನವನ್ನೇ ಬಿಟ್ಟುಬಿಡಬಹುದೆಂದು ನಿರ್ಧರಿಸಿದನು. ಈಗ ತೋಟಗಳಲ್ಲಿ ಕಾಗೆ ಹದ್ದುಗಳು ಬಾರದಂತೆ; ನಿಂತೆಡೆಯಲ್ಲಿ ನಿಂದು, ಕಾಯುತ್ತಿರುವನು.

ನೀತಿ—ಕಷ್ಟಕಾಲದಲ್ಲಿ ತಾಳ್ಮೆಯನ್ನು ವಹಿಸಿದರೆ ನೀತಿ ಮತ್ತು ಗುಣವಂತನಾಗಬಹುದು.

* * *

ಷಹರಿನ ಸಿನಿಮಾ ಮನೆಗೆ ಒಮ್ಮೆ ಯುವಕನೊಬ್ಬನು ಹೋದನು. ಹೋದವನೇ ಎಂಟಾಣೆ ಕುರ್ಚಿಯೊಂದರಲ್ಲಿ ಕುಳಿತನು. ಸ್ವಲ್ಪ ಹೊತ್ತಿನ ಮೇಲೆ ಯುವಕನ ಗುರುಗಳು ಸಿನಿಮಾಕ್ಕೆ ಎಂಟಾಣೆ ಕೊಟ್ಟು ಬಂದರು. ಗುರುತುಗಳು ಅನ್ವರ್ಥವಾಗಿಯೂ ದೊಡ್ಡವರು-ಬಲು ದೊಡ್ಡವರು-ಹಾಗಾದರೂ ಯುವಕನು ಎದ್ದು ಅವರಿಗೆ ಮರ್ಯಾದೆ ಸಲ್ಲಿಸಲಿಲ್ಲ. ಅವರು ಇವನೆದುರಿನಲ್ಲೇ ಕುಳಿತರು.

ಆ ಸಾಯಂಕಾಲವೆಲ್ಲಾ ಯುವಕನು ದೊಡ್ಡ ಗುರುಗಳ ಬೆನ್ನನ್ನೇ ನೋಡುವಂತಾಯಿತು.

ನೀತಿ—ದೊಡ್ಡವರಿಗೆ ಮರ್ಯಾದೆ ಮಾಡು.
ಹಾಗೂ ಎದುರು ಹಾಕಿಕೊಳ್ಳಬೇಡ.

* * *

ಒಂದಾನೊಂದು ಕಾಲದಲ್ಲಿ ಒಬ್ಬ ಬಡ ಪಾನನಿರೋಧಕ ಸಂಚಾಲಕನಿದ್ದನು. ಆತನಿಗೆ ಬಿಕ್ಕಳಿಕೆಯು ಬಹುವಾಗಿ ಬರುತ್ತಿತ್ತು. ಈತನು ಪಾನನಿರೋಧ ಉಪನ್ಯಾಸಗಳನ್ನು ಕೊಡುವಾಗಲೆಲ್ಲಾ ಈ ಬಿಕ್ಕಳಿಕೆಯು ಬಂದು, ಜನರೆಲ್ಲರನ್ನೂ ಬಹುವಾಗಿ ನಗಿಸುತ್ತಿದ್ದಿತು. ಹೀಗಾಗಿ ಈತನಿಗೆ ಮನುಷ್ಯರಲ್ಲೇ ನಂಬಿಕೆ ವಿಶ್ವಾಸಗಳು ಕಡಿಮೆಯಾಗುತ್ತ ಬಂತು.

ಆಗ ನಾಟಕದ ಕಂಪೆನಿಯವನೊಬ್ಬನು ಈತನಿಗೆ ಹಾಸ್ಯಗಾರನ ಪಾತ್ರವನ್ನು ವಹಿಸಿದನು. ಸಾಕಷ್ಟು ಹಣವನ್ನೂ ಕೊಟ್ಟನು. ಬೇಜಾರಿನಿಂದ ಈತನು ಆ ಕೆಲಸವನ್ನೊಪ್ಪಿಕೊಂಡನು.

ನೀತಿ—ಲೋಕಾಪವಾದಕ್ಕೆ ಗುರಿಯಾಗಬೇಡ
ಅಥವಾ
ಚೌತಿ ಚಂದ್ರನನ್ನು ನೋಡಬೇಡ

ಅವಸರದಲ್ಲಿ ಸೀಪಾಯಿ ಸೀನುಕ್ಕೆ ಶುರು ಮಾಡಿದ

* * *

ಸೈನ್ಯವೆಲ್ಲಾ ಭಂಗಾರ-ಸರದಾರ ಮಾತ್ರ ಹಿತ್ತಾಳೆ.

* * *

ಸಮಯಕ್ಕೊದಗದ ಸೈನ್ಯ
ಇದ್ದರೇನು ಹೋದರೇನು.

* * *

ಕತ್ತಿ ಬಲ್ಲುದೇ ಹೊತ್ತ
ಕ್ಷತ್ರಿಯನ ಹೇಡಿತನವ.

ಕಾರ್ಯದರ್ಶಿಯ ಕಾಗದಗಳು

ಬರ್ಮಾಲಯ, ಬೆಂಗಳೂರು
೩-೩-೪೨

ಪ್ರಿಯ ಕಾರ್ಯದರ್ಶಿ,

ಮೊನ್ನೆ ಸಂಗೀತ ಕಛೇರಿಯಲ್ಲಿ ನಾನು ಕುಳಿತಿದ್ದಾಗ ಶ್ರೀ|| ಜಯ ತಿಲಕ ಅವರು ನನ್ನ ಮೇಲೆ ಬೇಕು ಬೇಕಾಗಿಯೇ ನೋಟಿಸನ್ನು' ಎಸೆದರು. ಅವರನ್ನು ಸಮಾಜದಿಂದ ಬಹಿಷ್ಕಾರ ಮಾಡಲೇ ಬೇಕು. ಅದಕ್ಕಾಗಿ ಮುಂದಿನ ವಾರ ಖಂಡಿತವಾಗಿ ನೀವು ಕಾರ್ಯನಿರ್ವಾಹಕ ಸಮಿತಿಯ ಸಭೆಯನ್ನು ಏರ್ಪಡಿಸಲೇ ಬೇಕು. ನಾನೂ ಬರುತ್ತೇನೆ. ಅಲ್ಲಿಯೇ ಈ ವಿಷಯವನ್ನು ನಿರ್ಧರಿಸಬೇಕು.

ನಿಮ್ಮವ
ರಾಯಚಂದ್ರಾಚಾರಿ,
ರಿಟೈರ್ಡ್ ಪೋಸ್ಟ್ ಮಾಸ್ಟರ್ ಬರ್ಮಾ

*

ಕೊಲಂಬಾ ಗೃಹ
೩-೩-೪೨

ಪ್ರಿಯ ಕಾರ್ಯದರ್ಶಿ,

ಮೊನ್ನೆ ಸಂಗೀತ ಕಛೇರಿಯಲ್ಲಿ ಶ್ರೀ|| ರಾಯಚಂದ್ರಾಚಾರಿಯವರು ನನ್ನ ಕಡೆಗೇ ದುರುದುಟ್ಟಿ ನೋಡುತ್ತಾ ಹೀನಾಮಾನವಾಗಿ ತಮ್ಮ ಮುಖವನ್ನು ಕಿಂಡರಿಸಿಕೊಳ್ಳುತ್ತಿದ್ದರು. ಸಭೆಯವರೆಲ್ಲರಿಗೂ ಇದು ಗೋಚರವಾಗಿದೆ. ಇಂತಹವರನ್ನು ಸದಸ್ಯರಾಗಿಟ್ಟುಕೊಳ್ಳುವುದು ಸಭೆಯ ಕೀರ್ತಿಗೆ ಕಳಂಕ. ಅದರಲ್ಲೂ ಕಾರ್ಯನಿರ್ವಾಹಕ ಸಮಿತಿಯಲ್ಲಿರುವುದು ಶುದ್ಧ ಅನ್ಯಾಯ. ಇವರನ್ನು ಸಭೆಯಿಂದ ತೆಗೆದು ಹಾಕಲೇಬೇಕು. ಮುಂದಿನ ವಾರದಲ್ಲೇ ಕಾರ್ಯನಿರ್ವಾಹಕ ಸಮಿತಿಯ ಸಭೆಯೊಂದನ್ನು ಏರ್ಪಡಿಸಿ. ನಾನು ಬಂದು ಈ ವಿಚಾರವನ್ನು ಸಮಾಪ್ತಿಮಾಡುತ್ತೇನೆ.

ನಿಮ್ಮವ
ಶ್ರೀ|| ಜಯತಿಲಕ
ಸಿಲೋನಿನ ಟೀ ಕಂಪೆನಿಯ ಮಾಲೀಕ

*

ಸುಂದರ ನಿಲಯ
೫-೩-೪೨

ಪ್ರಿಯ ಕಾರ್ಯದರ್ಶಿ,

ಮುಂದಿನ ವಾರ ಒಂಭತ್ತನೆಯ ತಾರೀಖಿಗೆ ಕಾರ್ಯನಿರ್ವಾಹಕ ಸಮಿತಿಯು ಸೇರುವುದೆಂದು ಬರೆದಿದ್ದೀರಿ. ಆ ದಿನ ನಾನು ಮೈಸೂರಿಗೆ ಹೋಗಲೇಬೇಕಾಗಿದೆ. ಆದ್ದರಿಂದ ನಾನು ಸಭೆಗೆ ಬರಲಾಗುವುದಿಲ್ಲ. ಕಾರ್ಯಗಳೆಲ್ಲವೂ ಆದಮೇಲೆ ನನಗೊಂದು ಕಾಗದ ಬರೆಯಿರಿ.

ನಿಮ್ಮವ
ಸುಂದರಶಾಸ್ತ್ರಿ
ಕಾರ್ಯನಿರ್ವಾಹಕ ಸಮಿತಿ ಸದಸ್ಯ

*

ಘಟುವಿಲ್ಲಿ.
೬-೩-೪೨.

ಪ್ರಿಯ ಕಾರ್ಯದರ್ಶಿ,

ಸಮಿತಿಯ ಮುಂದಿನ ಸಭೆಯ ಆಹ್ವಾನವು ಕೈ ಸೇರಿತು. ಶ್ರೀ ರಾಯಚಂದ್ರಾಚಾರಿಯವರ ಕಾಗದವನ್ನು ನೋಡಿದೆ. ನಿಮಗೆ ತಿಳಿದಂತೆಯೇ ನನಗೆ ಕಣ್ಣು ಬೇನೆ ಬಹಳ ದಿನಗಳಿಂದಲೂ

ಇದೆ. ವೈದ್ಯರು ಅದಕ್ಕೆ ಶಸ್ತ್ರ ಚಿಕಿತ್ಸೆ ಮಾಡಬೇಕೆಂದು ಬಹಳ ದಿನಗಳಿಂದಲೂ ಹೇಳುತ್ತಿದ್ದರು. ಈ ವಾರದಲ್ಲಿ ನಾನು ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳಬೇಕೆಂದಿದ್ದೇನೆ. ಹಾಗಾಗಿ ನಾನು ಸಭೆಗೆ ಬರಲಾಗುವುದಿಲ್ಲ.

ಕಾರ್ಯ ಕಲಾಪಗಳೆಲ್ಲವೂ ಸೂಕ್ತವಾಗಿ ನಡೆಯುತ್ತೆಂದು ನಂಬಿರುತ್ತೇನೆ.

ನಿಮ್ಮವ

ಭೀಮಾಚಾರ್ಯರಾಯ

ಕಾರ್ಯ ನಿರ್ವಾಹಕ ಸಮಿತಿ ಸದಸ್ಯ

✱

ಸುಧಾಸದನ

೭-೩-೪೨

ಸ್ವಾಮಿ,

ತಾವು ಮುಂದಿನ ವಾರ ಕಾರ್ಯ ನಿರ್ವಾಹಕ ಸಮಿತಿಯ ಸಭೆಯೊಂದನ್ನು ಏರ್ಪಡಿಸಿ ಇರುವಿರೆಂದೂ, ಆದಿನ ನಾನು ಬರಬೇಕೆಂದೂ ಬರೆದಿರುವಿರಿ. ಆದರೆ ಆ ದಿನ ನನ್ನ ಪೂಜ್ಯ ಗುರುಗಳೂ ಸಂಗೀತ ಶಾಸ್ತ್ರ ಕೋವಿದರೂ ಆದ ಶ್ರೀ ದಂಗೇ ಪಲ್ಲಿಯ ಭೀಮಯ್ಯಂಗಾರ್ಯರು ನನ್ನ ಮನೆಗೆ ಬರುತ್ತಾರೆ. ಆದಕಾರಣ ನಾನು ಅಂದು ಪೂಜೆಯನ್ನು ಏರ್ಪಡಿಸಿದ್ದೇನೆ. ತಮ್ಮ ಸಭೆಗೆ ಬರಲು ಅವಕಾಶವಾಗುವುದಿಲ್ಲ. ತಮ್ಮ ಕಾರ್ಯಗಳೆಲ್ಲವೂ ಸುಗುಮವಾಗಲೆಂದು ಹಾರೈಸುತ್ತೇನೆ. ತಾವು ಯಾವರೀತಿ ಮಾಡಿದರೂ ಅದಕ್ಕೆ ನನ್ನ ಪೂರ್ಣ ಸಹಾನುಭೂತಿ ಉಂಟು.

ಇತಿ ತಮ್ಮ ವಿಧೇಯ,

ಸಂ|| ವಿ|| ಕೃಷ್ಣರಾಯ

ಕಾರ್ಯನಿರ್ವಾಹಕ ಸಮಿತಿ ಸದಸ್ಯ

೯-೩-೪೨ ರಲ್ಲಿ ಕಾರ್ಯನಿರ್ವಾಹಕ ಸಮಿತಿಯ ಕೊಠಡಿಯಲ್ಲಿ ಸಭೆಯು ನಡೆಯಲು ಸಕಲವೂ ಏರ್ಪಟ್ಟಿತ್ತು. ಮೇಜಿನ ಮೇಲೆ ಕಾರ್ಯದರ್ಶಿಯವರ ಕಾಗದ ಬಂದಿತ್ತು.

✱

ಸ್ವಾಮಿ,

ನಮ್ಮ ತಾಯಿಗೆ ಸಖ್ತ ಖಾಯಿಲೆ ಎಂದು ತಾರು ಬಂದಿದ್ದರಿಂದ ಈ ಬೆಳಿಗ್ಗೆ ನಾನು ಊರು ಬಿಟ್ಟು ಹೋಗಬೇಕಾಗಿದೆ. ಸಭೆಯ ಕಾರ್ಯಕ್ರಮದ ಪಟ್ಟಿಗಳೆಲ್ಲವೂ ತಯಾರಾಗಿವೆ. ಸಭೆಯ ಗುಮಾಸ್ತ ಲಿಂಗನು ನಿಮ್ಮ ಸೇವೆಗಾಗಿ ಇರುತ್ತಾನೆ.

ಇತಿ

ಕಾರ್ಯದರ್ಶಿ

✱

ಬೆಂಗಳೂರು

೧೦-೩-೪೨

ಶ್ರೀ ಕಾರ್ಯದರ್ಶಿಯವರಿಗೆ,

ಲಿಂಗಪ್ಪನು ಮಾಡುವ ನಮಸ್ಕಾರಗಳು. ನೀವು ಹೇಳಿದಂತೆಯೇ ನಾನು ಕೊಠಡಿಯ ಬಾಗಿಲನ್ನು ನಿನ್ನೆ ತೆಗೆದು ಸಭೆಗೆ ಎಲ್ಲವನ್ನೂ ಸಿದ್ಧಪಡಿಸಿದ್ದೆ. ಮೊದಲು ಶ್ರೀರಾಯಚಂದ್ರಾಚಾರ್ಯರು ಬಂದರು. ಎಂದಿನಂತೆ ಛತ್ರಿಯನ್ನು ತಂದಿದ್ದರು. ಐದು ನಿಮಿಷಗಳಾದ ಮೇಲೆ ಶ್ರೀ ಜಯತಿಲಕರಾಯರೂ ಬಂದರು. ಇವರಿಬ್ಬರೂ ಕೊಠಡಿಯಲ್ಲಿ ಸೇರಿದಾಗ ನಾನು ಹೊರ ಬಾಗಿಲನ್ನು ಮುಚ್ಚಿಕೊಂಡೆ. ಕಿಟಕಿಯ ಕಂಡಿಯಿಂದ ನೋಡಿದೆ. ಇಬ್ಬರೂ ಲಟಾಪಟಿ ಹೊಡೆದಾಡಲಾರಂಭಿಸಿದರು. ರಾಯಚಂದ್ರಾ

ಚಾರ್ಯರ ಛತ್ರಿಗೆ ಬಹಳ ಪೆಟ್ಟಾಗಿ ಅದು ಮುರಿದುಹೋಗಿತ್ತು. ಹಾಗೆಯೇ ಜಯತಿಲಕರಾಯರ ಕೋಲಿಗೂ ಬಹಳವಾಗಿ ಪೆಟ್ಟು ಬಿದ್ದು ಅದೂ ನೂರು ತುಂಡುಗಳಾಗಿತ್ತು. ಮೇಜಿನ ಮೇಲಿನ ಶಾಯಿ ಮಡಕೆಯು ಗೋಡೆಯ ಮೇಲೆ ಬಿದ್ದು ಗೋಡೆಯನ್ನು ವಿಕಾರ ಮಾಡಿತ್ತು. ಕಾಗದಗಳೆಲ್ಲವೂ ಚಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಯಾವು ಯಾವುದೋ ಭಾಷೆಯಲ್ಲಿ ಸಂಭಾಷಣೆಗಳು ನಡೆಯುತ್ತಿತ್ತೆಂದು ಹೇಳಬಹುದು. ಬಹಳವಾಗಿ ಮಹಾ ಪ್ರಾಣಗಳೇ ಉಪಯೋಗಿಸಲ್ಪಟ್ಟಿದ್ದುವು. ಆದರೂ ಪ್ರಾಣಹಾನಿಯಾಗಲಿಲ್ಲ.

ಈ ದಿನ ಬೆಳಗ್ಗೆ ಕೇಳಿದ್ದರಲ್ಲಿ ಶ್ರೀ॥ ರಾಯಚಂಪ್ರಾಚಾರ್ಯರೂ ಜಯತಿಲಕರಾಯರೂ ಇಬ್ಬರೂ ಒಟ್ಟುಗೂಡಿ ರಾಮೇಶ್ವರ ಯಾತ್ರೆಗೆ ಹೋಗುತ್ತಾರೆಂದು ತಿಳಿಯಬಂತು.

ನೀವು ಊರಿಗೆ ಹಿಂತಿರುಗಿ ಬರಬಹುದು. ಇಲ್ಲಿಯ ವಾತಾವರಣವು ಶಾಂತಿಸ್ಥಿತಿಯಲ್ಲಿದೆ.

ಇತಿ ನಿಮ್ಮ ವಿಧೇಯ
ಲಿಂಗಪ್ಪ
ಸಭೆಯ ಗುಮಾಸ್ತ

ಒಂದು ಐತಿಹಾಸ್ಯಕ ಕತೆ

ಕೃಷ್ಣಂಧಾನ

ಪೂರ್ವಕಾಲದಲ್ಲಿ ಒಂದು ಮಹಾ ರಾಜ್ಯವಿದ್ದಿತು. ಅಲ್ಲಿನ ನಿವಾಸಿಗಳೆಲ್ಲರೂ ಶಾಂತಿಸ್ವರೂಪರು. ಸಾತ್ವಿಕ ಸ್ವಭಾವವುಳ್ಳವರು ಒಮ್ಮೆ ನೆರೆ ರಾಜ್ಯದವರು ವ್ಯಾಪಾರದ ಸಲುವಾಗಿ ಬಂದವರು, ಈ ಜನರ ಸ್ವಭಾವವನ್ನು ಕಂಡು, ಮೆಲ್ಲಮೆಲ್ಲಗೆ ಇಲ್ಲಿಯೇ ನೆಲೆಸಿದರು, ಮೆತ್ತಮೆತ್ತಗೆ ರಾಜ್ಯಭಾರವನ್ನು ಕೈಗೊಂಡರು. ರಾಜ್ಯದ ಐಶ್ವರ್ಯವನ್ನೆಲ್ಲಾ ಹಲವಾರು ವಿಧಾನಗಳಲ್ಲಿ ತಮ್ಮ ದೇಶಕ್ಕೆ ಸಾಗ ಹಾಕಿದರು. ಇದನ್ನು ಮನಗಂಡ ಪ್ರಜೆಗಳೆಲ್ಲರೂ ವಿರೋಧಿಸ ಹತ್ತಿದರು. ಆದರೆ ಸಾತ್ವಿಕರ ವಿರೋಧ ಹೇಗೆ ? "ನೀವು ಮಾಡುವುದು ಅನ್ಯಾಯ ಹಾಗೆ ಮಾಡಿದರೆ ನಾವು ನಿಮ್ಮಗಳನ್ನು ಶತ್ರುಗಳೆಂದು ತಿಳಿಯುತ್ತೇವೆ" ಎಂದು ಹೇಳತೊಡಗಿದರು. ನೆರೆ ರಾಜ್ಯದವರಾದರೂ "ನೀವು ಏನುಬೇಕಾದರೂ ಹೇಳಿಕೊಳ್ಳಿ ನಮ್ಮ ಕಾರ್ಯಕ್ಕೆ ಅಡಚಣೆ ತಾರದಿದ್ದರೆ ಸಾಕು" ಎಂದು ಹೇಳಿ ತಮಗೆ ಬೇಕಾದ್ದನ್ನೇ ಮಾಡುತ್ತಿದ್ದರು. ಹೀಗಾಗಿ ಇಬ್ಬರಿಗೂ ಏನೇನೂ ಮೈತ್ರಿ ಇರಲಿಲ್ಲ.

ಆಗ್ಗೆ ಒಂದು ಮಹಾ ಕಾಮಾಲೆಯ ಜಾಡ್ಯದ ಭಯವು ದೇಶದಲ್ಲೆಲ್ಲಾ ಹರಡಹತ್ತಿತು. ಪೂರ್ವದಿಕ್ಕಿನಿಂದ ಬಂದ ಈ ಜಾಡ್ಯವು ರಾಜ್ಯಭಾರ ನಡೆಸುತ್ತಿದ್ದವರ ಮನಸ್ಸನ್ನು ಬಹುವಾಗಿ ಭೀತಿ ಪಡಿಸಿತು. ಇದರಿಂದ ಉಳಿಗಾಲವಿಲ್ಲ

ವೆನ್ನೈವನ್ನು ಆಶ್ಚರ್ಯಪಡಿಸಿತು. ಆಗ ರಾಜ್ಯಭಾರ ಮಾಡುವವರಿಗೆ ಒಂದು ವಿಷಯ ತಿಳಿಯಬಂತು. ಪ್ರಜೆಗಳಲ್ಲಿ ಕೆಲವು ಮೂಲಿಕೆ ಮಂತ್ರಗಳಿವೆ. ಅವನ್ನು ಉಪಯೋಗಿಸಿವರೆ ಈ ಸಾಂಕ್ರಮಿಕ ಜಾಡ್ಯದ ವಿಪತ್ತನ್ನು ಪರಿಹರಿಸಬಹುದು ಎಂದು ನೀವು ಈ ಮೂಲಿಕೆಗಳನ್ನು ನಮಗೆ ಕೊಡಿ ನಾವು ನಿಮ್ಮನ್ನು ಸ್ವತಂತ್ರರನ್ನಾಗಿ ಮಾಡುತ್ತೇವೆ. ಎಂದು ಹೇಳಿದರು. ಪ್ರಜೆಗಳಿಗೆ ಹಿಂದಿನ ನೆನಪು ಅಳಿಯುವಂತಿರಲಿಲ್ಲ. ಹಾಗಾಗಿ ನೀವೇನೇನು ಸ್ವಾತಂತ್ರ್ಯ ಕೊಡುತ್ತೀರಿ ಎಂದು ಕೇಳಿದರು.

ಆಗ ರಾಜ್ಯಭಾರ ಮಾಡುತ್ತಿದ್ದವರು ಪ್ರಜೆಗಳ ಹತ್ತಿರ ತಮ್ಮ ರಾಯಭಾರಿಯನ್ನು ಕಳಿಸಿದರು. ರಾಯಭಾರಿಯು ಸ್ವತಂತ್ರ ಪ್ರೇಮಿಯೆಂದೂ, ಪ್ರಗತಿಗಾಮಿ ಎಂದೂ ಲೋಕಪ್ರಸಿದ್ಧನಾದವನು. ಅಂದ ಮೇಲೆ ಪ್ರಜೆಗಳು "ದಿಟವಾಗಿಯೂ ಇವರುಗಳು ನಮಗೆ ಪೂರ್ಣ ಸ್ವತಂತ್ರ ಕೊಡಬೇಕೆಂದಿದ್ದಾರೆ. ನಾವು ಇವರಿಗೆ ನೆರವಾಗಿ ಈ ಪೂರ್ವದಿಕ್ಕಿನ ಜಾಡ್ಯವನ್ನು ಎದುರಿಸಿ ಪರಿಹರಿಸೋಣ" ಎಂದುಕೊಂಡರು. ಹಾಗೆಯೇ ರಾಯಭಾರಿಗೆ ಹೇಳಿದರು. ರಾಯಭಾರಿಯೂ ಪೂರ್ಣ ಸ್ವಾತಂತ್ರ್ಯ ಕೊಡುವುದಾಗಿ ವಚನಕೊಟ್ಟನು.

ಆದರೆ ಒಬ್ಬ ದೂರದೃಷ್ಟಿಯುಳ್ಳ ಪ್ರಜೆಯು "ಪೂರ್ಣ ಸ್ವಾತಂತ್ರ್ಯ" ಎಂದರೇನು ಎಂದು ಕೇಳಿದನು. ಮಿಕ್ಕ ಪ್ರಜೆಗಳೆಲ್ಲರಿಗೂ ಈ ಯೋಚನೆ ಹೊಳೆಯಲೇ ಇಲ್ಲ. "ಪೂರ್ಣ ಸ್ವಾತಂತ್ರ್ಯ" ಎಂದರೆ "ಪೂರ್ಣ ಸ್ವಾಂತತ್ರ್ಯ" ಎಂದು ತಿಳಿದುಕೊಂಡಿದ್ದರು. ಈ ಪ್ರಶ್ನೆಯನ್ನು ಕೇಳುತ್ತಲೇ ರಾಯಭಾರಿಯು ಆ ಪದದ ಅರ್ಥವನ್ನು ವಿಶದೀಕರಿಸಿದನು. "ಪೂರ್ಣ ಸ್ವಾತಂತ್ರ್ಯ" ಎಂದರೆ ನೀವುಗಳೇ ರಾಜ್ಯಭಾರ ಮಾಡುವುದು. ನಿಮ್ಮ ದೇಶದ ಕಾರ್ಯಕ್ರಮಗಳನ್ನೆಲ್ಲಾ ನೀವೇ ನಡೆಸುವುದು" "—ನಾವು ಹೇಳಿದ ಹಾಗೆ—" ಎಂದು ಸ್ಪಷ್ಟಪಡಿಸಿದನು.

ಆಗ ಸಂಧಾನವು ಮುರಿದುಬಿತ್ತು. ಪ್ರಜೆಗಳೆಲ್ಲರೂ "ಓಹೋ ಇವರುಗಳು ಹೊಸ ವ್ಯಾಕರಣಿಗಳೂ ಕೂಡ, ಇವರ ಮನಸ್ಸು, ಮಾತು, ಯಾವುದೂ ವ್ಯತ್ಯಾಸ ಹೊಂದಿಲ್ಲ. ಆದರೆ ಮಾತಿಗೆ ಅರ್ಥ ಹೇಳುವುದು ಹೊಸ ರೀತಿಯದು ಅಷ್ಟೆ" ಎಂದು ಚೆನ್ನಾಗಿಯೂ ಅರಿತರು.

ಈ ಸಂಧಾನವು ಮುರಿದುದು ಇಡೀ ಚರಿತ್ರೆಯಲ್ಲೇ ಸುಪ್ರಸಿದ್ಧವಾಯಿತು. ಸಕಲ ಜನಾಂಗದವರೂ ಈ ಹಾಸ್ಯ ಸಂಧಾನವನ್ನು ನೋಡಿ ಹೊಟ್ಟೆ ಹುಣ್ಣಾಗುವಂತೆ ನಕ್ಕರು. ಹಲ ಕೆಲವರು "ಅಯ್ಯೋ ವಿಪತ್ತು ಬಂದಾಗಲೂ ವಿಕಟ ಮಾರ್ಗವೇ" ಎಂದು ನೊಂದುಕೊಂಡರು.

ರಾಯಭಾರಿಯ ಹೆಸರು ಶ್ರೀಯುತ ಕೃಪ, ಅಂತೇ ಇದು ಕೃಪ್ಸಂಧಾನ ಎಂದು ಹೆಸರುಗೊಂಡಿತು.

ಪಾಂಡುವಿನ ಪದ್ಯವಾಚನ

ನನ್ನ ಹಳೇ ಸ್ನೇಹಿತ, ಆಧುನಿಕ ಕನ್ನಡಕವಿ, ಕವಿಸಮ್ಮೇಳನದಲ್ಲಿ ವಾಚನ ಮಾಡಿದವನು, ವಿಮಾ ವ್ಯವಸಾಯ ಪತ್ರಿಕೆಗೆ ಐದಾರುಸಲ ತನ್ನ ಪದ್ಯಗಳನ್ನು ಕಳುಹಿಸಿದವನು, "ಪಾಂಡು". ಆದಿನ ಅಂತರಿಕ್ಷದಲ್ಲಿ ತನ್ನ ಸ್ವಂತ ಕವನಗಳಲ್ಲಿ ಕೆಲವನ್ನು ಓದುತ್ತಾನೆ ಅಂತ ಪೇಪರಲ್ಲಿ ನೋಡಿದಾಗ, ನಾನು ಸಂಜೆ ೬-೪೫ಕ್ಕೆ ಸರಿಯಾಗಿ ಆನಂದ ಭುವನಕ್ಕೆ ಹೋದೆ. ಆನಂದ ಭುವನದಲ್ಲಿ ಕಾಫಿ ಚೆನ್ನಾಗಿರುವುದಿಲ್ಲ. ಆದರೂ, ಅಲ್ಲಿ ರೇಡಿಯೋ ಚೆನ್ನಾಗಿದೆ ; ಯಾರಾದರೂ ಇಂಥಾದ್ದು ಹಾಕು ಅಂದರೆ ಗೊಣಗದೆ ಹಾಕುತ್ತಾನೆ, ಪುಣ್ಯಾತ್ಮ !

"ಪಾಂಡು"ವಿಗೂ ನನಗೂ ಬಹಳ ವರ್ಷಗಳ ಸ್ನೇಹ. ಲಂಗೋಟಿ; ಚಡ್ಡಿ, ಷರಾಯಿ, ಪೈಜಾಮು—ಎಲ್ಲಾ ಅಂತಸ್ತಿನ ಜೀವನವನ್ನೂ ಒಟ್ಟಾಗಿ ಕಳೆದಿದ್ದವು. ಆದರೆ ಕಾಲೇಜು ಬಿಟ್ಟಮೇಲೆ ಅವನೆಲ್ಲೋ ಇನ್ಷ್ಯೂರನ್ಸ್ ಕಂಪನಿ ಏಜಂಟಾದ ; ನಾನು ಯಥಾಪ್ರಕಾರ ಸಂಗೀತದ ಮೇಷ್ಟ್ರು ! ಆದ್ದರಿಂದಲೇ ನಾನು ರೇಡಿಯೋ ಪ್ರೋಗ್ರಾಂ ನೋಡಿದ್ದು ; ಆದ್ದರಿಂದಲೇ ನನಗೂ ಆನಂದ ಭುವನದ ರೇಡಿಯೋವಿಗೂ ಗೆಳೆತನ,....ಹಿಂದೆ ಹಾಸ್ಟಲಲ್ಲಿದ್ದಾಗ ಪಾಂಡು ನನ್ನನ್ನೂ ಕೂರಿಸಿಕೊಂಡು ಪ್ರಾಸಕ್ಕಾಗಿ ಪ್ರಾಣಬಿಡುತ್ತಾ ಬುರುಡೆ ಕೆರೆಯುತ್ತಿದ್ದ ಚಿತ್ರ ನನ್ನ ಕಣ್ಣೆದುರಿಗೆ ಸುಳಿದಾಡಿತು. ಅವನ ಭಾವಲಹರಿಯ ಸೊಗಸೇ ಸೊಗಸು!

"ನಿನ್ನ ಮುರಳಿಯ ಗಾನ ಮೊಳಗದಿರೆ ಕಿವಿಗೆ" ಎಂಬ ಒಂದು ಪಂಕ್ತಿಯಲ್ಲಿ 'ಮೊಳಗದಿರೆ' ಎಂದು ಹೇಳಿಕೊಟ್ಟವನು ನಾನು. "ನಿನ್ನ ಕೊಳಲ ಶಬ್ದ ತಾಕದಿರೆ ನನಗೆ" ಅಂತ ಪಾಂಡು ಮೊದಲು ಬರೆದಿದ್ದ. ಶಬ್ದ ತೆಗಿದುಹಾಕಿ ಗಾನ ಅಂತ ಸೇರಿಸಿದ್ದು, ರಾಜ ! ತಾಕದಿರೆ ತೆಗೆದು ಮೊಳಗದಿರೆ ಮಾಡಿದ್ದು ನಾನು ; ಕೊಳಲಿಗೆ ಬದಲಾಗಿ ಮುರಳಿ ಎಂದು ಹೇಳಿದ್ದು ಮನ್ನಾರ್‌ಕೃಷ್ಣ. ಕಡೆಗೆ ಕಿವಿಗೆ ಎಂಬ ಮಾತಿನ ವಿಷಯವಾಗಿ ದೊಡ್ಡ ಚರ್ಚೆಯಾಗಿ ಅದನ್ನ ಹಾಕಿಸಿದ್ದು ಕೇಶು! ಹೀಗೆ ಒಟ್ಟು ಗುಂಪು ಗುಂಪೇ ಸೇರಿ ರಚಿಸಿದ ಪದ್ಯ ಅದು. ಅದನ್ನ ಈಗ ಪಾಂಡು ಓದುತ್ತಾನೋ ಇಲ್ಲವೋ ?.......

ಓದದೆ ಉಂಟೆ. ಆ ಒಂದು ಪದ್ಯದಿಂದಲೇ ಅವನು ಅಷ್ಟು ದೊಡ್ಡ ಕವಿಯಾದದ್ದು. "ಮುರಳಿಯ ಸುರುಳಿ'' ಎಂಬ ಕವನವನ್ನು ಬರೆದಿರುವ ಪಾಂಡು "ಅಂತಲೇ ಅವನನ್ನ ಅಧ್ಯಕ್ಷರುಗಳು ಸಭೆಗಳಿಗೆ ಪರಿಚಯಮಾಡಿಕೊಡುತ್ತಿದ್ದ

ರಂತೆ. ಅಂತೆ ಏನು ? ಅಕೊ ! ರೇಡಿಯೋ ನಿಲಯದಿಂದಲೂ ಅವನಿಗೆ ಅದೇ ಮರ್ಯಾದೆ ದೊರೆಯುತ್ತಿದೆ. ಇಂಥಾ ಕವನವನ್ನು ಬರೆದಿರುವ ಇಂಥಾ ಶ್ರೀಮಾನ್ ಪಾಂಡುರವರು........ಇತ್ಯಾದಿ ಹೇಳುತ್ತಿದಾರೆ. ಅಯ್ಯೋ ! ವಿಧಿವಿಲಾಸವೇ ! ಪಾಂಡುವಿಗೆ ರವರು ಬೇರೆ ! ನಾನ ನಿರೀಕ್ಷಿಸಿದ ಹಾಗೆ "ಪಾಂಡುರವರು". "ಮುರಳಿಯಸುರುಳಿ"ಯನ್ನೇ ಪ್ರಾರಂಭ ಮಾಡಿದರು. ಅದೊಂದು ಸೀಳ್ಗವನ-ಯಾವುದೋ ಒಂದು ಕವನ ಸ್ಪರ್ಧೆಗಾಗಿ ಪಾಂಡು ಅದರ ಪಂಕ್ತಿಗಳನ್ನು ಹೋಳುಮಾಡಿ ೫೦ಂಕ್ಕೆ ಹೆಚ್ಚಿಸಿದ್ದ. ಆದ್ದರಿಂದ ಆ ದಿನ ಅವನಿಗಿದ್ದ ಹದಿನೈದು ನಿಮಿಷಗಳಲ್ಲಿ ಮುರಳಿಯಲ್ಲದೆ ಮತ್ತೆ ಯಾವುದನ್ನೂ ಓದಲು ಅವಕಾಶವಿರಲಿಲ್ಲ. ಹಾಸ್ಟಲಲ್ಲಿದ್ದಾಗ, "ಲೋ ! ಪಾಂಡು ! ನಿನ್ನ ಪದ್ಯ ತೆಗೆದುಕೊಂಡು ಹೋಗಿ ಒಲೆಗೆಹಾಕು ; ಕಾವಿದ್ದರೆ ಕಾವ್ಯ, ಆದಕ್ಕೆ ಕೊಂಚ ಕಾವು ತಗುಲಲಿ" ಅಂತ ಹಾಸ್ಯ ಮಾಡುತ್ತಿದ್ದ ನಾನು ಈಗ ಅವನ್ನೇ ಕೇಳುತ್ತಾ, ಅದಕ್ಕಾಗಿಯೇ ಆನಂದ ಭುವನದ ಬಟ್ಟಲು ಬಸಿಗಳ ಖಣ ಖಣ ನಿನದದ ನಡುವೆ ಕುಳಿತು ಹೊಲಸು ಕಾಫಿ ಕುಡಿಯುತ್ತಿದೇನೆ ಅಂದರೆ 'ಪಾಂಡು' ನಗುತ್ತಾನೆ, ಖಂಡಿತ ! ಅವನು ನಂಬುವುದಿಲ್ಲ....ಆದ್ದರಿಂದ ಅವನಿಗೆ ನಾಳೆ ಒಂದು ಕಾಗದ ಬರೆದು ತಿಳಿಸಬೇಕು....

ಈ ರೀತಿ ಯೋಚಿಸುತ್ತಾ, ಮೊದಲನೆಯ ಎರಡು ಮೂರು ಪಂಕ್ತಿಗಳನ್ನು ಕೇಳಿದೆ. ಪಾಂಡುವಿನ ಧ್ವನಿಯಲ್ಲಿ ಯಾವ ಬದಲಾವಣೆಯೂ ಕಂಡುಬರಲಿಲ್ಲ; ಹತ್ತು ವರ್ಷದ ವಿಮಾ ಜೀವನ, ಬಿಸಿಲು ಮಳೆ ಎನ್ನದೆ ಅಲೆದಾಟ, ಕೃತ್ರಿಮ ನವನೀತಸಂಭಾಷಣ,-ಯಾವುದೂ ಅವನ ಕಂಠವನ್ನು ಕೆಡಿಸಿರಲಿಲ್ಲ. ನನ್ನ ಕಣ್ಣರಳಿತು; ಕಿವಿಗಳು ನೆಟ್ಟಗಾಗಿ ಹಿಂದಕ್ಕೂ ಮುಂದಕ್ಕೂ ಓಲಾಡಿದುವು ಬಾಯಿ ತೆರೆಯಿತು.

'ಸಾವಧಾನದಿ ಸಾಗಿತು ರೈಲು"

ಎಂದು ಅವನು ರಂಗನ ಕೊಳಲನ್ನು ಕೊಂಡಾಡಿದಾಗ, ನನ್ನ ಕಣ್ಣಲ್ಲಿ ನೀರುಕ್ಕಿತು. ಅದೇ ಆ ಪದ್ಯದ ನಾಲ್ಕನೆಯ ಪಂಕ್ತಿ.

ಆಗ ಯಾರೋ ಹಿಂದಿನಿಂದ, "ರೀ! ಬೇರೆ ಕಡೆ ತಿರುಗಿಸಿರಿ" ಎಂದು ಕೂಗಿದರು. ನಾನು ಮೆತ್ತಗೆ ಅವರ ಹತ್ತಿರಕ್ಕೆ ಸರಿದು, "ಯಾಕಪ್ಪ? ಇವರು ಪಾಂಡು" ಅಂಬೋ ದೊಡ್ಡ ಕವಿಗಳು" ಎಂದು ಪ್ರಾರಂಭ ಮಾಡಿದೆ. "ಪಾಂಡೂನೂ ಬೇಡ, ಧೃತರಾಷ್ಟ್ರನೂ ಬೇಡ! ರೀ! ಸಂಗೀತ ಯಾವುದೂ ಇಲ್ಲವೇನ್ರಿ?" ಎಂದು ಎಂಟು ಹತ್ತು ಜನ ಒಟ್ಟಿಗೆ ಕೂಗಿದರು. ಅಷ್ಟು ಹೊತ್ತಿಗೆ ರಿಸೀವರೊಳಗಿಂದ "ಪೇಷಂಟುಗಳು" ಅಂತ ಕೇಳಿಸಿತು. ಆಗಲೇ ೨೫ನೇ ಪಂಕ್ತಿ! "ರಂಗ ಕೊಳಲನೂದಿದಾಗ, ನೋವನು ಮರೆತರು ಪೇಷಂಟುಗಳು" ಎಂಬ ಭಾಗ, ಈ ಹಾಳು

ಜನಕ್ಕೆ ಪುಣ್ಯವಿಲ್ಲ....ಅಂದುಕೊಂಡೆ. ಜನರ ಆರ್ಭಟೆ ಹೆಚ್ಚಾಯಿತು; ಮಧ್ಯೆ ಮಧ್ಯೆ ಪಾಂಡುವಿನ ಪದ್ಯದ ತುಂಡುಗಳು!

ಎರಡು ಮಸಾಲೆ!...."ಬೆಂದೊಡಲ ತಣಿಸಲು"....ಹಿಂದುಸ್ತಾನಿ ಸಂಗೀತ ಹಾಕಿರಿ!....ಮೂರು ಜನ ಎಂಟಾಣೆ...."ಬಡತನದಿ ಕೊರಗುವರ" ಸಿನಿಮಾ ಹಾಡಿಲ್ಲವೇನ್ರಿ...."ಗಾನಕ್ಕೆ ಗಾಣವಯ್ಯ"



"ಗಾನಕ್ಕೆ ಗಾಣ" ಎಂಬುದನ್ನು ನಾನೇ ಮೊದಲು ಹೇಳಿದ್ದು ಪಾಂಡುವಿಗೆ! ಅವನನ್ನೇ ನಾವು ಹಾಗೆ ಹೊಗಳುತ್ತಿದ್ದುದು. ಅದನ್ನೇ ಪದ್ಯದಲ್ಲಿ ಒಂದು ಪಂಕ್ತಿ ಮಾಡಿಬಿಟ್ಟಿದ್ದ ಭೂಪ....೧೧೧ನೆಯ ಪಂಕ್ತಿ........

ಅಷ್ಟು ಹೊತ್ತಿಗೆ ಹೋಟೆಲ್ ಮಾಲೀಕನಿಗೂ ಕೂಡ ಮಹಾ ಜನರ ಅಭಿಪ್ರಾಯವೇ ಸರಿ ಎಂದೆನಿಸಿತು. ರಿಸೀವರಿನ ಗುಂಡಿಗಳನ್ನು ಹಿಡಿದು ತಿರುಗಿಸಿ ಜನಪ್ರಿಯವಾದ ಮತ್ತಾವುದಾದರೂ ಕಾರ್ಯಕ್ರಮ ಎಲ್ಲಿಂದ ಬರುತ್ತಿದೆ ಎಂದು ಪರೀಕ್ಷಿಸಲುಪಕ್ರಮಿಸಿದ.

ನಾನು ನಿರಾಶನಾಗಿ ಕುಳಿತೆ. ಆತನ ಹುಡುಕಾಟದ ನಡು ನಡುವೆ ಪಾಂಡು, ಪಾಪ, ಬಾಯಿಹಾಕಿ, "ನೇರಾಗಿ ಕರುವಾಗಿ (Curve) ಸಾಗಿದುವು ನದಿಗಳು" ಎಂಬ ಪಂಕ್ತಿಯಲ್ಲಿ 'ಕರುವಾಗಿ' ಎಂಬುದನ್ನೂ "ಡಂಗುರವ ಬಡಿ ಬಡಿದು" ಎಂಬ ಪ್ರಯೋಗವನ್ನೂ ಹೇಳಿದ. ಕೇಳಿದಷ್ಟೇ ಕಿವಿ ಪುಣ್ಯ ಅಂತ ನಾನೂ ಸುಮ್ಮನಾದೆ. ಕಡೆಗೆ, "ಸ್ವಾಮಿ! ಅಲ್ಲೇ ಕೊಂಚ ಹೊತ್ತು....ಹಾಗೆಯೇ ಹಿಡಿದಿರಿ....ಒಂದು ನಿಮಿಷ....ಕೊನೆಯ ಹತ್ತು ಪಂಕ್ತಿ ಬಹು ಚೆನ್ನಾಗಿರುತ್ತೆ" ಅಂತ ಅಂಗಲಾಚಿದೆ. ಮಾಲೀಕರ ಮನಸ್ಸೂ ಕರಗಿತು.

ಆದರೆ, ಅಷ್ಟು ಹೊತ್ತಿಗೆ ಸರಿಯಾಗಿ ಶನಿ ಗ್ರಹವೂ ಅದರ ಸುತ್ತಣ ಹತ್ತು ಚಂದ್ರಬಿಂಬಗಳೂ ಒಟ್ಟಿಗೆ ಬಂದ ಹಾಗೆ, ಯಾರೋ ಒಬ್ಬರು ಸ್ಕೂಲ್ ಮೇಷ್ಟ್ರು ಹುಡುಗರ ಹಿಂಡೊಂದನ್ನ ಮೃಗಾಲಯದಿಂದ ಕರೆತಂದರು, ಒಬ್ಬೊಬ್ಬರಿಗೆ ಒಂದೊಂದು ಪೊಟ್ಟಣ ಚೌ ಚೌ ಕೊಡಿಸುವುದಕ್ಕಾಗಿ.

ಆ ಹುಡುಗರೋ! ಆಗತಾನೆ 'ಜೂ' ನೋಡಿಕೊಂಡು ಬಂದ ಉತ್ಸಾಹ! ಒಬ್ಬೊಬ್ಬರೂ ಒಂದೊಂದು ಮೃಗದ ಕೂಗನ್ನು ಅಣಕಿಸುತ್ತಾ ಅನುಕರಿಸುತ್ತಾ ಬೊಬ್ಬೆಯಿಟ್ಟರು.

ಪಾಂಡುವಿನ ಕಟ್ಟಕಡೆ ವಾಕ್ಯ ಮಾತ್ರ ನನ್ನ ಕಿವಿಗೆ ಬಿತ್ತು. "ನನ್ನ ವಾಚನವನ್ನು ತಾಳ್ಮೆಯಿಂದ ಕೇಳಿದ್ದಕ್ಕೆ ಸರ್ವರಿಗೂ ವಂದನೆಗಳು."

ಒಂದು ಹಳೆಯ ಕಥೆ

ಒಬ್ಬಾನೊಬ್ಬನು ಒಂದಾನೊಂದು ಜ್ವರದಿಂದ ಹಾಸಿಗೆ ಹಿಡಿದು ನರಳುತ್ತಿದ್ದಾಗ ಒಬ್ಬರ ಹಿಂದೊಬ್ಬರಾಗಿ ನೂರಾರು ವೈದ್ಯರು ಅವನ ನಾಡಿ ಹಿಡಿದು ಕಾಸು ಕಸಿದರು. ಕಡೆಗೆ ಬಂದ ಒಬ್ಬರು ಪಂಡಿತರು ಮುಚ್ಚುಮರೆ ಇಲ್ಲದೆ ಮರಣದ ಮಾತನ್ನೇ ಎತ್ತಿದರು. ಬೆಳಗಾಗುವುದರೊಳಗಾಗಿ ಪ್ರಾಣಪಕ್ಷಿ ದೇಹಪಂಜರದಿಂದ ಹಾರಿಬಿಡುತ್ತದೆ ಎಂದು ನುಡಿದೇ ಬಿಟ್ಟರು! ಆದರೆ, ಚಿತ್ರಗುಪ್ತನಿಗೆ ಚೀಟಿ ಸಿಗಲಿಲ್ಲ; ಯಮದೂತರು ಬರಲಿಲ್ಲ; ಜ್ವರ ವಾಸಿ ಆಯಿತು! ಕೆಲದಿನಗಳಾದಮೇಲೆ ಆತ ಹಾಸಿಗೆಯಿಂದೆದ್ದು ಬೀದಿಯಲ್ಲಿ ಸಂಚಾರ ಮಾಡತೊಡಗಿದ. ಎದುರಿಗೆ ಅಮಂಗಳ ಹೇಳಿದ ವೈದ್ಯರೇ ಸಿಕ್ಕರು. ಅವರು ನಕ್ಕರು. "ಓಹೋ! ಯಾವಾಗ ಬರೋಣವಾಯಿತು? ಪರಲೋಕದಲ್ಲಿ ಎಲ್ಲರೂ ಕ್ಷೇಮವೇ?" ಎಂದು ಕುಚೋದ್ಯ ತೆಗೆದರು. ಅದಕ್ಕೆ ಆತ, "ಕ್ಷೇಮವಲ್ಲದೆ ಏನು? ವೈತರಣಿಯನ್ನು ದಾಟುತ್ತಲೂ ಮೃತರಿಗೆ ಇಹಲೋಕವೇ ಮರೆತು ಹೋಗುತ್ತಾದ್ದರಿಂದ ಅಲ್ಲಿ ಎಲ್ಲರೂ ಸುಖವಾಗಿದ್ದಾರೆ. ಆದರೆ, ಒಂದು ಸಮಾಚಾರ! ನಿಮಗೆ ತಿಳಿಸಿಬಿಡುತ್ತೇನೆ. ಅಲ್ಲಿಂದ ನಾನು ಹೊರಡುವ ಮೊದಲು ಪರಲೋಕದ ಪೋಲೀಸಿನವರು ವೈದ್ಯರನ್ನೆಲ್ಲಾ ಹಿಡಿದು ಶಿಕ್ಷಿಸಬೇಕೆಂದು ತೀರ್ಮಾನಿಸಿ ಎಣಿಕೆ ಮಾಡುತ್ತಿದ್ದರು. ಏಕೆಂದರೆ, ವೈದ್ಯರು ಸಾಯುವವರನ್ನು ಹಾಯಾಗಿ ಸಾಯಗೊಡಿಸದೆ ಮನುಷ್ಯನ ಆಯುಷ್ಯವನ್ನು ಹೆಚ್ಚಿಸು ವರಂತೆ. ತಮ್ಮ ಹೆಸರು ಬಂದಾಗ ನಾನು ಅಲ್ಲೇ ಇದ್ದೆ. ತಾವು ವೈದ್ಯರೇ ಅಲ್ಲ! ತಮ್ಮ ವೈದ್ಯವೆಲ್ಲಾ ಬರಿಯ ಮೋಸ ಅಂತ ಅವರಿಗೆ ಹೇಳಿ ತಮ್ಮ ಹೆಸರನ್ನು ಹೊಡೆದು ಹಾಕಿಸಿ ದ್ದೇನೆ!" ಎಂದ.

ನೋವಿಲ್ಲದೆ ಕೀಳುವುದು

ಅಜಿರಾಮಯ್ಯನು ಹೆಬ್ಬಿ ಗುಬ್ಬಾಲೆಯಿಂದ ಹೊಸದಾಗಿ ಷಹರಿಗೆ ಬಂದವನು. ವ್ಯಾಸಂಗವಿಲ್ಲದಿದ್ದರೂ ವ್ಯಾಪಾರದ ಅನುಭವ ಇದ್ದವನಾದುದರಿಂದ ತನ್ನ ಹಳ್ಳಿಯನ್ನು ಬಿಟ್ಟು ಷಹರಿನಲ್ಲಿ ಹಣ ಸಂಪಾದನೆಗೆಂದು ಬಂದವನು. ಬರುವಾಗ ಕೈಲಿ ಒಂದು ಗಂಟು, ತಲೆಯಲ್ಲೊಂದು ಗಂಟು. ಇವೆರಡರೊಡನೆ ಬಂದು ಹೋಟಲಿನ ಹಜಾರದಲ್ಲಿ ಸ್ಥಾಪಿಸಿಕೊಂಡನು. ಅಲ್ಲಿ ಒಂದು ಹೊತ್ತು ಊಟ ಮಾಡಿಕೊಂಡು ಏನಾದರೂ ವ್ಯಾಪಾರ ಶುರು ಮಾಡಲು ಯೋಚಿಸುತ್ತಿದ್ದನು. ದೊಡ್ಡ ವ್ಯಾಪಾರಗಳಿಗೆ ಹಣ ಸಹಾಯ ಬೇಕು. ಅದಿಲ್ಲದಿದ್ದುದರಿಂದ ಸಣ್ಣ ಪುಟ್ಟ ವ್ಯಾಪಾರಗಳ ಯೋಚನೆ ಮಾಡಿದನು. ಎಂಟಾಣೆ ಅಡಿಕೆ ಒಂದಾಣೆ ರಂಗಿನ ಸಾಮಾನು ತೆಗೆದುಕೊಂಡು ಹೋಗುವುದು, ಅಡಿಕೆಗೆ ಬಣ್ಣ ಕಟ್ಟಿ ಚಿಕ್ಕ ಚಿಕ್ಕ ಪೊಟ್ಟಣಗಳನ್ನು ಮಾಡುವುದು. ಹೋಟಲುಗಳ ಹತ್ತಿರ ಹಾಸ್ಟಲುಗಳ ಹತ್ತಿರ, ಕೋರ್ಟುಗಳ ಹತ್ತಿರ, ಕಛೇರಿಗಳ ಹತ್ತಿರ ಇವುಗಳನ್ನು ತೆಗೆದುಕೊಂಡು ಹೋಗಿ ಮೂರು ಕಾಸಿಗೊಂದು ಪೊಟ್ಟಣದಂತೆ ಮಾರುವುದು. ಈ ವ್ಯಾಪಾರದಲ್ಲಿ ಮೊದಲು ಮೊದಲು ದಿನಕ್ಕೆಂಟು ಹತ್ತು ಆಣೆ ಸಂಪಾದಿಸುತ್ತಿದ್ದನು. ಆಮೇಲೆ ವ್ಯಾಪಾರವು ಕುದುರ ಹತ್ತಿತು. ಎಲ್ಲಾ ಹೋಟಲುಗಳವರೂ ಈ ಪೊಟ್ಟಣಗಳನ್ನೇ ಕೊಳ್ಳಲಾರಂಭಿಸಿದರು. ಕಡೆ ಕಡೆಗೆ ಚಿಲ್ಲರೆ ಅಂಗಡಿಗಳಲ್ಲಿಯೂ ಇದನ್ನೇ ಮಾರಲಾರಂಭವಾಯಿತು. ಮದುವೆ ಮುಂಜಿ ಮನೆಗಳಲ್ಲೂ ಈ ಪೊಟ್ಟಣಗಳೇ ಆದರಣೀಯವಾಯಿತು. ಹೀಗಾಗಿ ಈಗ ಅಜಿರಾಮಯ್ಯನು ಅಡಿಕೆ ತೋಟಗಳನ್ನು ಕೊಂಡುಕೊಂಡಿರುವನು. ಲವಂಗ ಜಾಯಿಕಾಯಿ ಪತ್ರೆಗಳ ಮಂಡಿಯೊಂದನ್ನು ಇಟ್ಟಿರುವನು. ಕಾಗದದ ಕಾರ್ಖಾನೆಯ ಮಾಲೀಕನಾಗಿರುವನು. ಲಕ್ಷ್ಮಿಯು ಇವನ ಅಂಗೈ ಮೇಲೆ ತಾಂಡವವಾಡುತ್ತಿರುವಳು.

ಈ ಸ್ಥಿತಿಗೆ ಬಂದವನಾದರೂ ಅಜಿರಾಮಯ್ಯನು ತನ್ನ ಪೂರ್ವ ಸ್ಥಿತಿಯನ್ನು ಮರೆತಿರಲಿಲ್ಲ. ಮೊದಲ ಹೋಟಲ ಹಜಾರವನ್ನು ಮರೆತಿರಲಿಲ್ಲ. ಕಾಸಿಗೆ ಕಾಸು ಗಂಟು ಹಾಕಿದರೆ ಅದು ರೂಪಾಯಾಗುವುದು, ಕಾಸನ್ನು ರಕ್ಷಿಸಿಕೊಂಡರೆ ರೂಪಾಯಿ ತಾನಾಗಿಯೇ ರಕ್ಷಿತವಾಗುವುದು. ಎಂಬುದನ್ನು ಚೆನ್ನಾಗಿಯೂ ಅರಿತಿದ್ದನು. ಅಂದ ಮೇಲೆ ಲಕ್ಷಾಧೀಶ್ವರನಾದಾಗ್ಯೂ ಒಂದು ಬಿಡಿ ಕಾಸು ಪೋಲು ಮಾಡುತ್ತಿರಲಿಲ್ಲ. ಹಾಗೆ ಕಾಪಾಡಿಕೊಂಡು ಬರುತ್ತಿದ್ದ ತನ್ನ ಅಡಿಕೆ ಲಕ್ಷ್ಮಿಯನ್ನು.

ಒಂದು ದಿನ ಅಜಿರಾಮಯ್ಯನು ತನ್ನ ಅಡಿಕೆಯನ್ನು ತಾನೇ ಸೇವಿಸಿ ಸುಖಪಡಬೇಕೆಂದು ಹಂಬಲಿಸಿದನು. ಆ ಮಧ್ಯಾಹ್ನ ಊಟ ಮಾಡಿದಮೇಲೆ ಮೂರು ಕಾಸು ಹೋದರೂ ಹೋಗಲಿ ಎಂದು ತನ್ನ ಅಂಗಡಿಯಲ್ಲಿ ತಾನೇ ಒಂದು ಪೊಟ್ಟಣವನ್ನು ಕೊಂಡುಕೊಂಡು ಬಾಯಿಗೆ ಹಾಕಿಕೊಂಡನು. ಹಾಕಿಕೊಂಡು ಗಮಗಮ ಎನ್ನುವ ಅಡಿಕೆಯು ಕರಗುವಂತೆ ಅಗಿಯಲಾರಂಭಿಸಿದನು. ಅಗಿಯಲಾರಂಭಿಸಿದ ಕೂಡಲೆ ಹಲ್ಲುಗಳ ಮಧ್ಯೆ ಒಂದು ಕಲ್ಲು ಸಿಕ್ಕಿ ಹಾಕಿಕೊಂಡಿತು. ಅದನ್ನು ಅಗಿಯಲು ಯತ್ನಪಟ್ಟಾಗ ಹಲ್ಲಿನ ಚೂರೊಂದು ಮುರಿದು ಬಿತ್ತೇ ವಿನಹಾ ಕಲ್ಲೇನೂ ಕರಗಲಿಲ್ಲ. ಬಾಯಿ ಮುಕ್ಕಳಿಸಿಕೊಂಡು, ಇನ್ನು ಮೇಲೆ ಈ ಪ್ರಯತ್ನವನ್ನೆಂದಿಗೂ ಮಾಡೆನೆಂದು ನಿಶ್ಚಯಿಸಿಕೊಂಡು, ಕಳೆದುಹೋದ ಮೂರು ಕಾಸಿಗಾಗಿ ಮರುಗಿದನು.

ಮರುಗಿದಾಕ್ಷಣವೇ ಮಾಡಿದ ಪಾಪವು ಶಿಕ್ಷಿಸದೇ ಬಿಟ್ಟೀತೆ? ಒಡೆದುಹೋದ ಹಲ್ಲು ನೋವಲಾರಂಭಿಸಿತು. ತನಗೆ ತಿಳಿದ ವೈದ್ಯವನ್ನೆಲ್ಲಾ ಮಾಡಿದನು ಸಾರ್ಥಕವಾಗಲಿಲ್ಲ. ಕಡೆಗೆ ಎರಡು ರಾತ್ರಿ ನಿದ್ರೆ ಹೋಯಿತು. ಮುಖ ಅರ್ಜುನನ ಧ್ವಜದ ಮೇಲಿನ ಮೊಗದಂತಾಯ್ತು. "ದಂತ ವೈದ್ಯನಲ್ಲಿಗೆ ಹೋಗಿಯೇಬಿಡುತ್ತೇನೆಂದು" ಧೈರ್ಯಮಾಡಿ ಆ ಮಧ್ಯಾಹ್ನ ಪೇಟೆಯ ಕಡೆಗೆ ಹೊರಟನು, ಮುಖವನ್ನು ಶಾಲಿನಿಂದ ಮುಕ್ಕಾಲು ಮುಚ್ಚಿಕೊಂಡು—

ಪೇಟೆಯಲ್ಲಿ ಹತ್ತಿರ ಹತ್ತಿರದಲ್ಲೇ ಇಬ್ಬರು ದಂತ ವೈದ್ಯರು. ಪೂರ್ವದ ಕಡೆಗೆ ಶ್ರೀಯುತ ಶಿಶುಪಾಲಯ್ಯನವರು, ಪಶ್ಚಿಮದ ಕಡೆಗೆ ಶ್ರೀಯುತ ರಾಮಶೇಷಯ್ಯನವರು. ಎರಡೂ ಒಂದೇ ತರಹ ಅಂಗಡಿಗಳು. ಒಂದೇ ತರಹ ಬೋರ್ಡುಗಳು. ವೈದ್ಯರುಗಳೂ ಒಂದೇ ತರಹ ಅನುಭವಶಾಲಿಗಳಿರಬಹುದೆಂದೂ, ಒಂದೇ ತೆರನಾಗಿ ಹಣ ಕೇಳಬಹುದೆಂದೂ ಅಜಿರಾಮಯ್ಯನವರು ಊಹಿಸಿದರು. ಅಂದಮೇಲೆ ಯಾರ ಹತ್ತಿರ ಹೋದರೆ ತಾನೇ ಏನು. ಇಬ್ಬರೂ ಒಂದೇ ಎಂದಂದುಕೊಂಡು, ಶಿಶುಪಾಲಯ್ಯನವರ ಹತ್ತಿರ ಹೋದನು. ಆತನು ಇವನ ಹಲ್ಲುಗಳನ್ನು ಪರೀಕ್ಷಿಸಿ, ಈ ಒಡೆದ ಹಲ್ಲು ಹೋಗಬೇಕೆಂದೂ ಇಲ್ಲದಿದ್ದರೆ ಇನ್ನು ಮುಂದೆ ಇನ್ನೂ ಅಪಾಯವೆಂದೂ ಹೇಳಿದನು. ನೋವಿನ ಬಾಧೆಯನ್ನು ತಾಳಲಾರದೆ ಅಜಿರಾಮಯ್ಯನು ಹಲ್ಲು ಕೀಳಿಸಿಕೊಳ್ಳಲು ಒಪ್ಪಿದನು. 'ಕೊಕೇನ್ ಇಂಜಕ್ಷನ್ ಒಂದು ಕೊಡುತ್ತೇನೆ. ಮೂರು ರೂಪಾಯಿಯಾಗುತ್ತೆ. ನೋವಿಲ್ಲದೆ ಕೀಳಬಹುದು' ಎಂದು ವೈದ್ಯನು ಹೇಳಿದನು. ಅಯ್ಯೋ! ಅಡಿಕೆ ಪೊಟ್ಟಣದ ಮೂರು ಕಾಸೂ ಹೋಯಿತು ಇನ್ನು ಮೂರು ರೂಪಾಯಿ ಹೋಗಬೇಕೇ ಎಂದು ಯೋಚಿಸತೊಡಗಿದ ಅಜಿರಾಮಯ್ಯನು, ವೈದ್ಯನ ಕೈಯಿನ ಇಕ್ಕಳವನ್ನು ನೋಡಿದನು. ಕೂಡಲೇ ಗಾಬರಿಪಟ್ಟು ಮೂರು ರೂಪಾಯಿ ಹೋದರೆ ಹೋಗಲಿ

ಎಂದು ಇಂಜಕ್ಷನ್ನಿಗೆ ಒಪ್ಪಿದನು. ವೈದ್ಯನು ಇಂಜಕ್ಷನ್ನನ್ನೂ ಕೊಟ್ಟನು. ನಂತರ ಇನ್ನು ಹತ್ತು ನಿಮಿಷವಾಗಲಿ, ಔಷಧಿಯು ಬೇರೂರಿದ ಮೇಲೆ ಹಲ್ಲು ಕೀಳುತ್ತೇನೆ ಎಂದು ಹೇಳಿ ತಾನು ಬೇರೆ ಕೆಲಸಕ್ಕೋಸ್ಕರ ಒಳಗಡೆ ಹೋದನು.

ಆಗ ನೋಡಿ ಅಜಿರಾಮಯ್ಯನಿಗೆ ಬುದ್ಧಿ ಓಡಿತು. ಬುದ್ಧಿಯ ಹಿಂದೆಯೇ ತಾನೂ ಆ ಕೊಠಡಿಯಿಂದ ಹೊರಕ್ಕೆ ಓಡಿದನು. ಓಡಿದವನೇ ಮೂರು ನಿಮಿಷದಲ್ಲಿ ರಾಮಶೇಷಯ್ಯನವರ ಅಂಗಡಿಯಲ್ಲಿ ಸಿದ್ಧನಾದನು. ಆ ವೈದ್ಯರೂ ಹಲ್ಲನ್ನು ನೋಡಿದರು. ತೆಗೆಯಲೇಬೇಕೆಂದರು. ಇಂಜಕ್ಷನ್ನಿಲ್ಲದಿದ್ದರೆ ನೋವಾಗುವುದೆಂದರು. ಮೂರೇ ರೂಪಾಯಿಗೆ ಇಂಜಕ್ಷನ್ನೆಂದರು. ಅಜಿರಾಮಯ್ಯನು ನಾನೇನೂ ನೋವಿಗೆ ಹೆದರುವುದಿಲ್ಲ. ಬಡವರು ನೋವಿಗೆ ಹೆದರಿದರೆ ಹೇಗಾದೀತು ಎಂದು ಹೇಳಿದನು. ವೈದ್ಯರು ನೀವು ಹೇಳಿದಂತೆ ಆಗಲಿ ಎಂದು ಹಲ್ಲನ್ನು ಕಿತ್ತರು. ಅಜಿರಾಮಯ್ಯನು ಸ್ವಲ್ಪವಾದರೂ ಕಿಮಕ್ಕಮಕ್ ಎನ್ನಲಿಲ್ಲ. ಹಲ್ಲು ತೆಗೆದ ಮೇಲೆ ವೈದ್ಯರು "ಸ್ವಾಮಿ ನಿಮ್ಮ ಧೈರ್ಯಕ್ಕೆ ನಾನು ಮೆಚ್ಚಿದೆ. ಹಲವಾರು ವರ್ಷಗಳಿಂದ ಈ ವೃತ್ತಿಯನ್ನು ಅಭ್ಯಾಸ ಮಾಡಿದ್ದೇನೆ. ನಿಮ್ಮಂತಹ ಧೈರ್ಯಶಾಲಿಗಳನ್ನು ಕಾಣಲಿಲ್ಲ" ಎಂದು ಕೊಂಡಾಡಿದರು.

ಆ ವೇಳೆಗೆ ಯಾರೋ ಜವಾನನು ಓಡಿಬಂದು 'ಡಾಕ್ಟರೇ ಒಂದು ತುರ್ತು ಕಾಗದವಿದೆ ಈಗಲೇ ನೋಡಬೇಕು" ಎಂದು ಕೂಗಿದನು. ಬಾಯಿ ಮುಕ್ಕಳಿಸಲು ನೀರು ಕೊಟ್ಟು ವೈದ್ಯನು ಪಕ್ಕದ ಕೊಠಡಿಗೆ ಹೋದನು. ಜವಾನನು ತಂದ ಕಾಗದವನ್ನು ನೋಡಿದನು.

"ಪ್ರಿಯ ರಾಮಶೇಷಯ್ಯ, ಈಗ್ಗೆ ಹತ್ತು ನಿಮಿಷಗಳ ಮುಂಚೆ ಒಬ್ಬ ಅಸಾಧಾರಣ ಕಳ್ಳಕೊರಮನು ನನ್ನಲ್ಲಿಗೆ ಬಂದಿದ್ದನು. ಹಲ್ಲು ತೆಗೆಯುವ ಮುನ್ನ ಇಂಜಕ್ಷನ್ನನ್ನು ಕೊಟ್ಟೆ. ಒಳಗೆ ಹೋಗಿ ಕೈ ತೊಳೆದುಕೊಂಡು ಬರುವ ವೇಳೆಗೆ ಆಸಾಮಿಯೇ ಪತ್ತೆಯಿಲ್ಲ. ನಿನಗೆ ಹೀಗಾಗಬಾರದೆಂದು ಈ ಕಾಗದ ಬರೆದು ಕಳಿಸಿದ್ದೇನೆ. ಅವನು ಹಸರು ಶಾಲು ಹೊದ್ದಿದ್ದಾನೆ, ಮೂರು ದಿನದ ಗಡ್ಡ ಇದೆ. ಹುಷಾರಾಗಿರು.

ಕಾಗದವನ್ನು ನೋಡಿದ ಕೂಡಲೇ ರಾಮಶೇಷಯ್ಯನು ಕೋಪದಿಂದ ನೀಲಿಯಾದನು. ಅಯ್ಯೋ! ಆ ಪಟಿಂಗನೇ ಇಲ್ಲಿರುವನು. ಅವನಿಗೆ ತಕ್ಕ ಶಾಸ್ತಿ ಮಾಡೋಣ ಬಾ ಎಂದು ಆ ಜವಾನನನ್ನೂ ಕರೆದುಕೊಂಡು ಒಳಗೆ ಹೊರಟನು

ತಿರುಗಿ ಚೆನ್ನಾಗಿರುವ ಹಲ್ಲುಗಳಲ್ಲಿ ಮೂರನ್ನಾದರೂ ಜೀವಸಹಿತ ಕಿತ್ತು ಹಾಕಿಬಿಡಬೇಕೆಂದು ನಿಶ್ಚಯಿಸಿಕೊಂಡನು. ಶಿಶುಪಾಲಯ್ಯನಿಗೆ ಹೇಳಿಕಳುಹಿಸಿ

ಅವನ ಕೈಯಲ್ಲೂ ಮೂರು ಹಲ್ಲುಗಳನ್ನು ಕೀಳಿಸಬೇಕೆಂದು ಖಂಡಿತ ಮಾಡಿಕೊಂಡನು. ರೇಗುಬೀಳುತ್ತಾ ಹಲ್ಲನ್ನು ಕಡಿಯುತ್ತಾ ಒಳಕ್ಕೆ ಬಂದನು.

ರೋಗಿಯು ಕುಳಿತಿದ್ದ ಕುರ್ಚಿಯು ಖಾಲಿಯಾಗಿತ್ತು.

'ಬನದ ಸತ್ತಿ'*

(ಶ್ರೀ|| ಬೇಂದ್ರೆಯವರಲ್ಲಿ ಕ್ಷಮಾಪಣೆಗಳೊಡನೆ)

ಯುವತಿ ಮಾರಿಗೆ ರಾಗರತಿಯು ಸಂಜಹಚ್ಚಿತ್ತ |
ಆಗ ಮುತ್ಸಂಜೆಯಾಗಿತ್ತ. ||
ನೆಲದಅಂಚಿಗೆ ಸರಿಗೆಯ ಸೆರಗು ಹ್ಯಾಂಗೊ ಬಿದ್ದಿತ್ತ |
ಗಾಳಿಗೆ ವ್ಯಾಲಕ್ಕೆದ್ದಿತ್ತ. || ೧ ||

ಬೊಗಸೆಗಣ್ಣಿನಾ ಕಾಮಿನಿಹೆಣ್ಣು ಕಾಫಿಗೆ ಹೋಗಿತ್ತ |
ತಿರುಗಿ ಕಾರಿಗೆ ಬರುತಿತ್ತ ||
ಶ್ಯಾಮಿ ನಾಯಿನ್ಹ್ಯಾಂಗ ಹಾದೀಯಾಗ ಸುಳಿತಿದ್ದ |
ತಿರುಗಿ ತಿರುಗಿ ನೋಡತಿದ್ದ || ೨ ||

ಕಾಮಿನಿ ಮಾರಿಯ ನಯನದ ನಗಿ ಹೂ ಮೆಲ್ಲಗ ಮೂಡಿತ್ತ |
ದೂರದ ಶ್ಯಾಮಿನ ಕೂಡಿತ್ತ ||
ತರುಣನ ಮನದಾ ಅರಳಿದ ಇಚ್ಛೆಯು ಕೆಚ್ಚಲಿ ಉಬ್ಬಿತ್ತ |
ಸರಿದ್ಯಾನು ಶ್ಯಾಮಿ ಅತ್ತಿತ್ತ || ೩ ||

ಸುಳ್ಳುಗಾತಿ ಬರಿ ಆಶೆಯ ತೋರಿ ಕಣ್ಸೆರೆ ಹಿಡಿದಿತ್ತ |
ಸರಸರ ಬೆಡಗಿಲಿ ನಡೆದಿತ್ತ ||
ಒಂದು ಮನದ ಗಿಣಿ ಹೋದ ನೆರಳಿನ ಬೆನ್ನಿಲಿ ಬರತಿತ್ತ |
ತನ್ನ ಕೈ ಕೈ ಹಿಸುಕಿತ್ತ || ೪ ||

---

*ನವಮ್ಮೂರಿನ ಕಬ್ಬನ್ ಪಾರ್ಕಿನ ಒಂದು ಸಂಧ್ಯಾ ದೃಶ್ಯ.

ಸಣ್ಣ ಕತೆಗಳಿಗೆ ಸುಲಭ ಸೂಚನೆಗಳು

ಪತ್ತೆದಾರಿ ಕಥೆ

ಪ್ರಣಯದ ಕತೆಯಾದಮೇಲೆ ಸ್ವಾಭಾವಿಕವಾಗಿ ಪತ್ತೇದಾರಿ ಕತೆಯು ಬಂದೇ ಬರಬೇಕು. ಇದಕ್ಕೆ ನಿದರ್ಶನಗಳನ್ನೇನೂ ಕೊಡಬೇಕಾಗಿಲ್ಲ. ಅನುಭವಶಾಲಿಗಳಿಗೆ ಇದು ಸ್ವತಃ ಗೋಚರವಾಗುವುದು. ಅನುಭವವಿಲ್ಲದವರಿಗೆ ಎಷ್ಟು ನಿದರ್ಶನಗಳನ್ನು ಕೊಟ್ಟರೂ ಪ್ರಯೋಜನವಿಲ್ಲ. ಅಂದಮೇಲೆ ನಿದರ್ಶನಗಳ ಅವಶ್ಯಕತೆಯಿಲ್ಲ.

ಪತ್ತೆದಾರಿ ಕತೆಗಳಲ್ಲಿ ಹಲವು ತೆರನಾದವುಗಳುಂಟು.

೧) ಮಾಸಲು ಬಟ್ಟೆಯನ್ನುಟ್ಟ ಕಥಾನಾಯಕನ ಮೇಲೆ ವಾಚಕರ ಅನುಮಾನ ಉಂಟಾಗುವುದು. ಕಥೆಯ ಕೊನೆಯಲ್ಲಿ ಇದೇ ಸತ್ಯವೆಂದು ಸಿದ್ಧಾಂತವಾಗುವುದು. ಇದು ಸಾಚಾ ಪತ್ತೆದಾರಿ ಕತೆ.

೨) ಇನ್ನು ಕೆಲವು ಪತ್ತೆದಾರಿ ಕತೆಗಳಲ್ಲಿ ಕಥಾನಾಯಕನು ಸುಗುಣಿಯಂತೆ ತೋರುವನು, ಲಕ್ಷಣವಂತ, ಗುಣವಂತ, ಭಾಗ್ಯವಂತ ಇತ್ಯಾದಿವಂತ, ಆದರೆ ಕತೆಯ ಅಂತ್ಯದಲ್ಲಿ ಇವನೇ ಆಪಾದಿತನಾಗಿ ಇವನೇ ದೋಷಿಯೆಂಬುದಾಗಿ ತಿಳಿಯಬರುತ್ತದೆ. ಇದು ಖೋಟಾ ಪತ್ತೆದಾರಿ ಕತೆ.

೩) ಕೆಲವು ಪತ್ತೆದಾರಿ ಕತೆಗಳಲ್ಲಿ, ಮಂಜಿನೊಳಗೆ ಮಂಜು, ತೊಡಕಿನೊಳಗೆ ತೊಡಕು. ಹೀಗಾಗಿ ಗ್ರಂಥಕರ್ತನು, ಕತೆಯು ಮುಗಿಯುವ ಮುನ್ನ ಕಥಾನಾಯಕನನ್ನು ಕೊಂದುಬಿಡುತ್ತಾನೆ. ಯಾರು ಅಪರಾಧಿಗಳು ಎಂಬುದು ಯಾರಿಗೂ ತಿಳಿಯುವುದಿಲ್ಲ, ಗ್ರಂಥಕರ್ತನಿಗೇ ತಿಳಿಯದೆ ಇದ್ದಮೇಲೆ ಯಾರಿಗೆ ತಿಳಿಯಬೇಕು? ಕಥಾಪಾತ್ರಗಳೆಲ್ಲರ ಮೇಲೂ ಅನುಮಾನ. ವಾಚಕರಿಗೆ ತೋರಿದಂತೆ ಊಹಿಸಿಕೊಳ್ಳಬಹುದು. ಇದು ಗ್ರಂಥಮುಕ್ತ ಪತ್ತೆದಾರಿ ಕತೆ.

೪) ನಾಲ್ಕನೆಯ ತೆರನಾದುದು ಅತಿ ಗಹನವಾದುದು; ಈ ಕತೆಗಳಲ್ಲಿ ಪ್ರತಿ ಒಂದು ಪಂಙ್ತಿಗೂ 'ವಾಚಕ ಮಹಾಶಯರೇ' ಎಂದು ಸಂಭೋಧನೆಗಳು ಹೇರಳವಾಗಿರುತ್ತವೆ. ಈ ಕತೆಯಲ್ಲಿನ ತೊಡಕುಗಳೆಂದರೆ, ವಾಚಕ ಮಹಾಶಯರಿಗೆ ತೊಡಕುಗಳೇ ವಿನಹಾ ಕತೆಗೆ ತೊಡಕುಗಳಲ್ಲ. ಕಡೆ ಕಡೆಗೆ ವಾಚಕ

ಮಹಾಶಯರಿಗೆ ಒಂದೇ ಗುಮಾನಿ ಬರುವುದು "ನಾನೇ ಖೂನಿ ಮಾಡಿದೆನೋ" ಎಂದು. ಇದು ನವೀನ ಪತ್ತೆದಾರಿ ಕತೆ.

ಈ ಕತೆಗಳಲ್ಲೆಲ್ಲಾ ಸಾಮಾನ್ಯವಾಗಿ ಕಂಡುಬರುವ ಕೆಲವು ಗುಣಗಳುಂಟು. ಎಲ್ಲರಿಗೂ ತಿಳಿದಂತೆಯೇ ಏನೊ ಒಂದು ಅಪಕೃತ್ಯ,—ಕಳುವು, ಖೂನಿ, ಭಸಾವಣೆ, ಮೂಗರ್ಜಿ ಬರೆಯುವುದು, ವಿಷಹಾಕುವುದು—ಇತ್ಯಾದಿ ನಡೆದಿರುತ್ತದೆ. ಇದನ್ನು ಕಂಡು ಹಿಡಿಯುವ ಕ್ರಮದ ರಚನೆಯೇ ಕತೆಯ ಸಾರಾಂಶ. ಈ ಕತೆಗಳಿಗೆಲ್ಲಾ ಕಳೆ ಕಟ್ಟುವುದೆಂದರೆ ವಾಚಕರಿಗೆ ಕೃತ್ಯಮಿಯ ಗುರುತು ಸುಲಭವಾಗಿ ಸಿಗಬಾರದು. ಮಸಕು ಮುಸುಕಾದ ಸೂಚನೆಗಳಿರಬೇಕು, ಹಲವಾರು ಜನರ ಮೇಲೆ ಗುಮಾನಿ ಬರಬೇಕು. ಈ ಅಚ್ಚರಿಯ ರಚನೆಯೇ ಕತೆಗಾರನ ಕಲೆ.

ಮಾದರಿಗಾಗಿ ಒಂದು ಸಣ್ಣ ಕತೆಯನ್ನು ರಚಿಸೋಣ.

ಒಂದು ಊರು, ಒಂದು ಕೇರಿ, ಒಂದು ದಾರಿ. ದಾರಿಯಲ್ಲೊಂದು ಮನೆ ಮನೆಯ ವರಾಂಡಾದಲ್ಲಿ ಒಬ್ಬ ಮಧ್ಯ ವಯಸ್ಕನು ಕುಳಿತುಕೊಂಡು, ಹುಬ್ಬು ಗಂಟಿಕ್ಕುತ್ತಾ, ಒಂದು ಕಾಗದವನ್ನು ಓದುತ್ತಿರುವನು. ಓದುತ್ತ ಓದುತ್ತ, ಬೇಗ ಬೇಗ ಬಿಸಿ ಉಸಿರು ಬಿಡಲಾರಂಭಿಸುವನು, ಇವನ ಮೀಸೆಗಳು, (ಇದ್ದರೆ) ನಿಮಿರೇಳಿ ನಿಲ್ಲುವುವು, ಕಡೆಗೆ ಕಾಗದವನ್ನು ಕೋಪದಿಂದ ತನ್ನ ಹಿಡಿಯಲ್ಲಿ ಅಮುಕುತ್ತಾ, 'ಲೇ' ಎಂದು ಗರ್ಜಿಸುವನು. ಒಳಗಿನಿಂದ 'ಲೇ' ಬಳುಕುತ್ತಾ ಬಂದು 'ಏನು ಅಂದರೆ' ಎನ್ನುವಳು.

"ನೋಡು, ಯಾರೋ ಅಜ್ಞಾತವಾಸಿಗಳು ಒಂದು ಕಾಗದ ಬರೆದಿದ್ದಾರೆ, ನಮ್ಮ ಹುಡುಗ ಆ ಕಿಟ್ಟಿಯು ಷಹರಿನಲ್ಲಿ ಶಾಲೆಗೆಂದು ಹೋಗಿ ಸಿಗರೇಟು ಅಭ್ಯಾಸಮಾಡಿದ್ದಾನಂತೆ. ಹಾಳು ಸೂ....ಮಗ ನನ್ನ ಬ್ರಾಹ್ಮಣ್ಯಕ್ಕೆ ಇವನೊಬ್ಬ ಕಂಟಕ. ಹೀಗೆ ಇವನು ಜಾತಿಭ್ರಷ್ಟನಾದರೆ ನನಗ್ಯಾರೇ ತಿಥಿ ಮಾಡುವರು"

"ಅಯ್ಯೋ ಯಾರು ಹಾಗೆ ಬರೆದಿದ್ದಾರೆ. ಯಾರೊ ಜ್ಞಾತಿಗಳು ಎಂದು ಹೇಳಿದಿರಿ. ನಮ್ಮ ಮೇಲಿನ ಮಾತ್ಸರ್ಯಕ್ಕೋಸ್ಕರ ನಿಮ್ಮ ಪುಟ್ಟ ಮಗನು ಹಾಗೆ ಬರೆದಿರಬೇಕು. ಪುಟ್ಟು ಮಗನನ್ನು ನೀವು ವಿಚಾರಿಸಬೇಕು. ಆ ಪಟಿಂಗ ಯಾವಾಗಲೂ ಇದೇ ಕೆಲಸ ಮಾಡುತ್ತಾನೆ"

"ಪುಟ್ಟು ಮಗ ಯಾಕೆ ಪಟಿಂಗ, ಅವನಲ್ಲ ಬರೆದಿರುವುದು. ಅಜ್ಞಾತವಾಸಿ ಎಂದೆ. ಜ್ಞಾತಿ ಎನ್ನಲಿಲ್ಲ. ಪಟಿಂಗ ನಿನ್ನ ಮಗ. ನಿನ್ನ ಸುಪುತ್ರ"

'ಹಾಗನ್ನಬೇಡಿ, ಎಲ್ಲಾ ವಿಚಾರಿಸಿ ನಂತರ ಹೇಳಿ. ಕೋಪಕ್ಕೆ ಹೋದ ಮೂಗು ಶಾಂತಿಗೆ ಬರುತ್ತೆಯೇ'

ಮೂಗಿನ ವಿಚಾರ ಎತ್ತಿದರೆ ಕಥಾನಾಯಕನಿಗೆ ಗಾಂಡೀವ ಪ್ರಯೋಗ ಆದಂತೆ. ಮೂಗು ಅವನ ಅಂಗಗಳಲ್ಲೆಲ್ಲಾ ಅತಿ ದಾರ್ಢ್ಯವಾದುದು, ಆದರೆ ಅವನ ಕೈಗಿಂತ ಮೇಲೆಂದಲ್ಲ—ಆದರೆ ಹೆಚ್ಚು ಕಡಿಮೆ ಹಿಡಿಯಷ್ಟೇ ಇದ್ದುದು.

"ಸಾಕೇ ನಿನ್ನ ಮಾತು, ನನ್ನ ಮೂಗಿನ ಮಾತೇಕೆ, ನಿನ್ನ ಕಿವಿ ಕೋಪಕ್ಕೆ ಹೋದರೂ ಶಾಂತಿಗೆ ಬರುವುದಿಲ್ಲ."

"ಸರಿ 'ನಿಮ್ಮ' ಮೂಗು ಎಂದು ನಾನು ಹೇಳಿದೆನೆ. ಬರಿ 'ಮೂಗು' ಎಂದು ಆದಿರಲಿ ನಮ್ಮ ಹುಡುಗನಿಗೆ ತಕ್ಷಣ ಒಂದು ಕಾಗದ ಬರೆದು ಕರೆಸಿಕೊಳ್ಳೋಣ. ಅವನನ್ನೇ ಕೇಳೋಣ. ಅವನು ತಪ್ಪಿತಸ್ಥನಾದರೆ ನೀವು ಮಾಡಿದ ಶಿಕ್ಷೆ ನಾನು ಅನುಭವಿಸುತ್ತೇನೆ."

"ಅವನೇನಾದರೂ ಸಿಗರೇಟು ಸೇದಿದ್ದರೆ ಅವನನ್ನು ಹುಟ್ಟಲಿಲ್ಲ ಎನ್ನಿಸಿಬಿಡತ್ತೇನೆ. ಇಂತಹ ಮಗ ಇರುವ ಬದಲು ಹೋದರೇ ಮೇಲು."

"ಅಯ್ಯೋ ಸಂಡಿಗೆ ಕರಿಯಲಿಕ್ಕೆ ಹಾಕಿದ್ದೆ. ಅದು ಕರುಕಲಾಗುತ್ತೆ', ಎಂದು 'ಲೇ' ಅಡಿಗೆ ಮನೆಗೆ ಹಿಂತಿರುಗುವಳು. ಸಂಡಿಗೆ ಎಂದರೆ 'ಲೇ' ಯ ಗಂಡನಿಗೆ ಮನಸ್ಸು ಸ್ವಲ್ಪ ಅರಳುವುದು, ಸಂಡಿಗೆಯಂತೆಯೇ.

ಇದಾದ ಕೆಲವು ದಿನಗಳ ಮೇಲೆ ಇವರು ಬರೆದ ಕಾಗದದ ಫಲವಾಗಿ' ಸುಪುತ್ರನು ಊರಿಗೆ ಬರುವನು. ಏನ್ ಆಶ್ಚರ್ಯ! ಜತೆಯಲ್ಲೇ ಪುಟ್ಟುವಿನ ಮಗನೂ ಊರಿಗೆ ಬರುವನು. ಇಬ್ಬರೂ ಒಟ್ಟುಗೂಡಿ ಸಿಗರೇಟು ಸೇದುತ್ತಾ ಮನೆಗೆ ಬರುವರು.

ಈಗ ಮಂಜಿನ ಕಾಲ. ಇವರುಗಳು ಬೆಳಿಗ್ಗೆ ಆರು ಗಂಟೆಗೆ ರೈಲಿನಿಂದ ಬರುತ್ತಿರುವರು. ತಾಯಿ ತಂದೆಗಳಿಬ್ಬರೂ ದೂರದಲ್ಲೇ ಇವರನ್ನು ಕಂಡರು.

"ನೋಡೇ. ನೋಡೇ ಏನು ಆವಾಗಿನಿಂದ ಸಿಗರೇಟು ಸೇದುತ್ತಿದ್ದಾರೆ. ಇಬ್ಬರನ್ನೂ ಕೊಂದುಹಾಕಿಬಿಡಬೇಕು."

"ಛೀ, ಸಿಗರೇಟಲ್ಲಿ ಬಂತು. ಅಂದರೆ, ಮಂಜು ಇದು."

"ಮಂಜಂತೆ ಮಂಜು. ಅದು ಮಂಜಾದರೆ ನಾನೂ ಸಿಗರೇಟು ಸೇದುತ್ತಾ ಇರಬೇಕಲ್ಲಾ"

"ಹಾಗೆಯೇ ಕಾಣುತ್ತೆ ಅಂದರೆ ನಿಮ್ಮನ್ನ ನೋಡಿದರೆ"

“ ಹಾಳುಬಾಯಿ ನಿನ್ನದು. ನಾನು ಸಿಗರೇಟು ಸೇದಿದ್ದನ್ನು ನೀನು ನೋಡ ಬೇಕೆಂಬ ಅಭಿಲಾಷೆಯೋನೊ”

“ನಿಮಗೆ ಈ ನೆಪದಿಂದಲಾದರೂ ಸಿಗರೇಟು ಸೇದಬೇಕೆಂದೇನೊ”

ಈ ವೇಳೆಗೆ. ‘ಆ ಗಂತುಕರಿಬ್ಬರೂ’ ಬರುವರು ಗಂಡ ಹೆಂಡಿರ ಮಾತೂ ನಿಲ್ಲುವುದು.

ಮಧ್ಯಾಹ್ನ ಕಥಾನಾಯಕನು ತನ್ನ ಸ್ನೇಹಿತ ಶ್ಯಾನುಭೋಗನ ಮನೆಗೆ ಹೋಗಿ ತನ್ನ ಕಷ್ಟ ದುಃಖಗಳನ್ನು ಹೇಳಿಕೊಳ್ಳುವನು. ತನ್ನ ಮಗನೇನಾದರೂ ಸಿಗರೇಟು ಸೇದಿದ್ದು ಖಂಡಿತವಾದರೆ ಅವನನ್ನು ಕೊಲ್ಲುವುದಾಗಿ ಶಪಥಮಾಡು ವನು. ಹೀಗೆ ಶಪಥ ಮಾಡಿದಾಗ ಶ್ಯಾನುಭೋಗನೊಡನೆ ಇನ್ನು ಮೂರು ಜನ ಸ್ನೇಹಿತರಿರುವರು.

ಇದಾದ ಹದಿನೈದು ದಿವಸ, ಒಂದು ಸಾಯಂಕಾಲ. ಕೇರಿಯಲ್ಲೆಲ್ಲಾ ಗುಲ್ಲೋಗುಲ್ಲು. ಸುಪುತ್ರ ಕಿಟ್ಟುವು ಮನೆಯಲ್ಲೇ ಮಧ್ಯಾಹ್ನ ಮರಣ ಹೊಂ ದಿದ್ದನೆಂದೂ, ಕಾರಣವು ಗೊತ್ತಿಲ್ಲವೆಂದೂ ಜನರು ವಿಧವಿಧವಾಗಿ ಮಾತನಾಡಿ ಕೊಳ್ಳುತ್ತಿದ್ದರು. ಪೋಲೀಸ್ ದಫೇದಾರ್ ಜಕ್ಕಸಿಂಗನು ತನಿಖೆಗೆ ಆರಂಭಿಸಿ ದನು. ಅವನ ತನಿಖೆಯಲ್ಲಿ ಈ ವಿಷಯಗಳು ಹೊರಬಿದ್ದುವು.

ಕಿಟ್ಟುವು ಸಾಯುವ ಮುನ್ನ ಸಿಗರೇಟು ಸೇದುತ್ತಿದ್ದನು.

ಕಿಟ್ಟುವು ಸತ್ತರೆ ಅವನ ಆಸ್ತಿಯೆಲ್ಲವೂ ಪುಟ್ಟು ಮಗನಿಗೆ ಬರುತ್ತಿತ್ತು. ಏಕೆಂದರೆ ಪುಟ್ಟು ಮಗ ಜ್ಞಾತಿ.

ಸಿಗರೇಟು ಸೇದುವ ಮಗನಿರುವುದಕ್ಕಿಂತ ಸಾಯುವುದೇ ಮೇಲೆಂದು ಕಿಟ್ಟು ತಂದೆಯು ಹೇಳಿದ್ದನು.

ಕಿಟ್ಟು ತಂದೆಯು ಬಲು ಕೋಪಗಾರ. ಮೂಗಿನ ಕೆಳಗೆ ಮಾಂಸ ಎಂದರೆ ಮೂಗಿನಷ್ಟೇ ಕೋಪ.

ಸರಿ ಇವುಗಳ ಸಾರಾಂಶವೇನು? ಕಿಟ್ಟು ತಂದೆಯು ಮಗನನ್ನು ಖೂನಿ ಮಾಡಿದ್ದನು. ಇಲ್ಲವೇ ಪುಟ್ಟು ಮಗನು ಆಸ್ತಿಗಾಗಿ ಖೂನಿ ಮಾಡಿದ್ದನು. ಇಬ್ಬ ರನ್ನೂ ಸೆರೆ ಹಿಡಿದರೆ ಖೂನಿಕಾರರು-ನು-ಸಿಕ್ಕಂತೆಯೇ. ಜಕ್ಕಸಿಂಗನು ಪೋ ಲೀಸು ಉಸ್ತುವಾರಿ ಸಹಿತ, ಕಿಟ್ಟು ತಂದೆಯ ಮನೆಗೆ ಹೊರಟನು.

“ಪೋಲೀಸಿನವನನ್ನು ಕಂಡ ಕೂಡಲೇ “ಲೀ”ಯು ಮೂರ್ಛಾಕ್ರಾಂತ ಳಾದಳು. ‘ಲೀ’ಯ ಗಂಡನು ಹೆಂಡತಿಗೆ ತಣ್ಣೀರೆರಚಿ ಅವಳು ಎಚ್ಚೆತ್ತನಂತರ ಜಕ್ಕಸಿಂಗನನ್ನು ಉದ್ದೇಶಿಸಿ “ಏನಯ್ಯಾ ಏಕೆ ಬಂದೆ ನೋಡು. ನೀನು ಬಂದ ಘಳಿಗೆ ನನ್ನ ಹೆಂಡತಿಗೆ ಹೀಗಾಯಿತು.”

“ನಿಮ್ಮನ್ನು ನಿಮ್ಮ ಮಗನ ಖೂನಿಗಾಗಿ ಬಂಧಿಸಲು ಬಂದಿದ್ದೇನೆ.”

"ಯಾರ ಮಗನ ಖೂನಿಗಾಗಿ."

"ನಿಮ್ಮ ಮಗನ"

"ಅಯ್ಯೋ ಪಾಪಿಯೇ ಅವನು ಈ ಮಧ್ಯಾಹ್ನ ತಾನೇ ಷಹರಿಗೆ ಹೋದನಲ್ಲಾ, ಅವನ ಮೇಲೆ ಯಾರೋ ಚಾಡಿ ಹೇಳಿ ಒಂದು ಮೂಗು ಕಾಗದ ಬರೆದಿದ್ದರು, ಅವನು ಸಿಗರೇಟು ಸೇದುತ್ತಾನೆಂದು. ವಿಚಾರಿಸಿದೆ. ಅದು ಸುಳ್ಳೆಂದು ಗೊತ್ತಾಯಿತು. ಅವನು ಶಾಲೆಗೆ ಹಿಂತಿರುಗಿ ಹೋದ."

ಜಕ್ಕಸಿಂಗನು ಮಿಾಶೆ ಮಣ್ಣು ಆಯಿತೆನ್ನುವನೇ? ನಿಮ್ಮ ಆ ಮೂಗು ಕಾಗದ ಬರೆದವನನ್ನು ಹಿಡಿಯುತ್ತೇನೆ ಎಂದು ಹೇಳಿ ಠಾಣೆಗೆ ಹಿಂತಿರುಗಿದ.

ನೀವು ಕೇಳಬಹುದು ಇದೇನು ಕತೆ ಇದರಲ್ಲೇನು ಆಶ್ಚರ್ಯ ಎಂದು.

ಇದರ ಆಶ್ಚರ್ಯ ಏನು ಗೊತ್ತೆ. ಕತೆಗಾರನು ಇನ್ನೂ ಬದುಕಿದ್ದಾನೆ. ಓದಿದವರು ಇನ್ನೂ ಸುಮ್ಮನಿದ್ದಾರೆ.

ಚಂದಾಯಣ

ಈಗ ತಾನೆ ಕೊಟ್ಟೆ. ಕೊಟ್ಟು ನಾ ಕೆಟ್ಟೆ ಎನಬಾರದು, ನಿಜ. ಆದರೂ, ಮನಸ್ಸು ಇನ್ನೂ ಕುದಿಯುತ್ತಾ ಇದೆ. ಹೃದಯವೇದನೆ ಇನ್ನೂ ನಿಂತಿಲ್ಲ. ಮುಟ್ಠಾಳನ ಹಾಗೆ ಕೈಯಲ್ಲಿದ್ದ ಹಣವನ್ನ ಮತ್ತೊಬ್ಬನಿಗೆ ಕೊಟ್ಟೆನಲ್ಲಾ ಎಂಬುದು ಕಣ್ಣಲ್ಲಿ ನೀರು ತರಿಸುತ್ತಿದೆ....ಇಷ್ಟು ದಿವಸವೂ ಆಗ ಬಾ, ಈಗ ಬಾ, ಹೋಗಿ ಬಾ, ಎಂದು ಧೈರ್ಯವಾಗಿ ಹೇಳುತ್ತಿದ್ದ ನನಗೆ ಇಂದೇಕೆ ಈ ಹೃದಯ ದೌರ್ಬಲ್ಯವೊದಗಿತು ?....ಕರ್ಣಾಟಕ ಸಂಘ ಚಂದಾ ಹಣವನ್ನು ಈಗ ತಾನೆ ಕೊಟ್ಟೆ. ಚಂದಾ, ಅಂದರೆ, ಹಿಂದಿನ ಎರಡು ವರ್ಷದ ಬಾಕಿ! ಈ ವರ್ಷದ ಚಂದಾ ಬಾಕಿ ಉಳಿದಿದೆ.

ಕಾರ್ಯದರ್ಶಿ, ಪಾಪ, ಬಡ ಮೇಷ್ಟರು. ಅವನಿಗೇನು ಗೊತ್ತು ಇತರರ ತಾಪತ್ರಯ? "ಓಹೋ! ಬರುವ ಶುಕ್ರವಾರ ಎಲ್ಲರೂ ಆರಾರು ಕಾಸು ತಂದು ಕೊಟ್ಟುಬಿಡಬೇಕು" ಅಂದರೆ ಮೂರು ರೂಪಾಯಿ ಚಿಲ್ಲರೆ ಶೇಖರವಾಗುವ ಹಾಗೆ ಸುಲಭಾ ಅಂತ ಅವನು ತಿಳಿದಿದ್ದ. ಚಂದಾ ವಸೂಲಿಯನ್ನು ಯಾರ ಮಾತಿಗೋ ಮರುಳಾಗಿ "ನಾಡು, ನುಡಿ, ನಾರಣಪ್ಪ, ನೇಗಿಲಯೋಗಿ, ಭಾವನಾ ಪ್ರಪಂಚ, ಓತಪ್ರೋತ" ಎಂತ ಕೂಗಾಡುತ್ತಾ ನಮ್ಮೆಲ್ಲರಲ್ಲೂ ಕನ್ನಡಮ್ಮನಿಗೆ ಒಂದು ನಂದಾದೀವಿಗೆಯನ್ನು ಹೊತ್ತಿಸಿ ಎಣ್ಣೆ ಬತ್ತಿಗಾಗಿ ತಿರುಪೆ ನೋಡಲು

ಮಾಡಿದ. ಕೊಂಕುಳಲ್ಲಿ ಒಂದು ಪುಸ್ತಕ ಸಹಿತವಾಗಿ ಎರಡು ಮೂರು ತಿಂಗಳು ಮನೆ ಮನೆ ತಿರುಗಿದ. ರಾತ್ರಿ ಹಗಲೆನ್ನದೆ, ಹೇಳಿದ ಕಾಲಕ್ಕೆ ಸರಿಯಾಗಿ ಬಾಗಿಲಲ್ಲಿ ಹಾಜರಿದ್ದ. ಕಡೆಗೆ ಆತನ ತಾಳ್ಮೆಯೂ ಎಲ್ಲೆ ಮೀರಿತು. ಏಕೆಂದರೆ, ಕೈ ಕಚ್ಚುವುದಕ್ಕೆ ಪ್ರಾರಂಭವಾಯಿತು. ಹಾರದ ಖರ್ಚೂ ತನ್ನ ಕುತ್ತಿಗೆಗೆ ಬೀಳ್ಳುತ್ತಿತ್ತು. ತಪ್ಪಿ ಪರಮಾನ ಸಾಲದೆಂದು ಹರಿಕಥೆಯವರು ರೇಗಿದರು; ಗಾಡಿ ಕಳುಹಿಸದೆ ಇದ್ದ ಪಕ್ಷದಲ್ಲಿ ಹಾಡುವುದಕ್ಕೆ ಬರುವುದಿಲ್ಲವೆಂದು ಪ್ರಾರ್ಥನೆ ಹೇಳುವ ಹುಡುಗಿಯರು ಹಠ ಹಿಡಿದರು, ಹಾಳಾಗಿ ಹೋಗಲಿ ಸಂಘವನ್ನು ಉದ್ಯಾಪನೆ ಮಾಡಿಬಿಡೋಣವೆಂದರೆ, ತಮ್ಮ ಹೆಸರು ಪೇಪರಲ್ಲಿ ಬರುವುದು ನಿಂತುಹೋಗುತ್ತದೆ. ಇನ್ಸ್ಪೆಕ್ಟರು ಬೇರೆ ಕನ್ನಡ ಪ್ರೇಮಿಗಳು. ಹಾಗಾಗಿ ಹೀಗಾಗಿ ಮನುಷ್ಯ ನನ್ನನ್ನೇ ಪಟ್ಟಾಗಿ ಹಿಡಿದುಬಿಟ್ಟ. ಹಳೇ ಬಾಕಿ ಒಂದೂವರೆ ರೂಪಾಯನ್ನಾದರೂ ಕೊಡಬೇಕೆಂದು ಕಾಡಿಸುತ್ತಾ ಎರಡು ತಿಂಗಳಿಂದ ಮನೆ ಮುಂದೆ ಮೊಂಡಾಟ! ಆತನ ನಡಿಗೆ ನುಡಿಗೆ ಇವು ಬರಬರುತ್ತಾ ಬಿರುಸಾದುವು. ಅವನಿಗೆ ಕೊಟ್ಟ ಹಣವನ್ನು ನಾನೂ ನನ್ನಾಕೆಯೂ ಬಹು ದಿವಸದ ಜಾಣತನ ಜಿಪುಣತನಗಳಿಂದ ಕೂಡಿಟ್ಟಿದ್ದೆವು. ನಶ್ಯ ತುಂಬದೆ, ಮೂಗನ್ನು ಬರಡುಬೀಳಿಸಿ, ಸಾಸುವೆ ಸಿಡಿಸದೆ ಸಾರನ್ನು ನಿಸ್ಸಾರ ಮಾಡಿ, ಗಾಡಿ ಹಣ ಉಳಿಸಿ ನಡೆದುಕೊಂಡು ಹೋಗಿ, ಹೊತ್ತು ಮೀರಿ ವಸಂತಸೇನೆಯ ಮುಕ್ಕಾಲು ಭಾಗವನ್ನು ಮಾತ್ರ ನೋಡಿ ಬಂದು, ಸೀಸದ ಹಾವಲಿಯನ್ನು ಕೊಟ್ಟು ಕ್ಷೌರಕನ ತಲೆ ಬೋಳಿಸಿ ಉಳಿಸಿದ್ದ ಕಾಸನು. ಬರುವ ಭಾನುವಾರ ನಾವಿಬ್ಬರೂ ಶ್ರೀರಂಗಪಟ್ಟಣಕ್ಕೆ ಹೋಗಿ ದರಿಯಾ ದೌಲತ್ ತೋಟದಲ್ಲಿ ಬೆಳದಿಂಗಳೂಟ ಮಾಡುವುದಕ್ಕಾಗಿ ಉಳಿಸಿದ ಕಾಸು.

ಕರ್ಣಾಟಕ ಸಂಘಕ್ಕೆ ಕಡ ಕೊಟ್ಟಿದ್ದಾಯಿತು; ಕಾರ್ಯದರ್ಶಿಯನ್ನು ಶಪಿಸಿದ್ದಾಯಿತು. ರಶೀತಿ ಜೊತೆಗೆ ಅವನಿಟ್ಟುಹೋದ ವಾರ್ಷಿಕೋತ್ಸವದ ಆಹ್ವಾನ ಪತ್ರಿಕೆಯನ್ನು ಓದಿ ನೋಡಿದೆ. ಯಥಾಪ್ರಕಾರ ಹಿಂದೆ ಬಂದಿದ್ದವರೇ ಈ ವರ್ಷವೂ! ಆದರೆ ಇದೇನಿದು?—ಸಂತೋಷಕೂಟ! ಬೆಳದಿಂಗಳೂಟ! ದರಿಯಾ ದೌಲತ್ ತೋಟದಲ್ಲೇ ಪರವಾಗಿಲ್ಲ. ಕೊಟ್ಟ ಕಾಸಿಗೆ ಏನಾದರೂ ಗಿಟ್ಟುತ್ತದಲ್ಲಾ, ಎಂದು ಹಿಗ್ಗಿದೆ. ಮುಂದಕ್ಕೆ ಓದಿದೆ—ಶ್ರೀರಂಗಪಟ್ಟಣದಲ್ಲೇ ಸಂತೋಷಕೂಟ! ರೋಗಿ ಬಯಸಿದ್ದೂ ಒಂದೇ, ವೈದ್ಯ ಕುಡಿಸಿದ್ದೂ ಒಂದೇ!

ಕಾರ್ಯದರ್ಶಿಯನ್ನು ಒಳಮನಸದಲ್ಲೇ ಕೊಂಡಾಡಿದೆ....ಮುಂದಕ್ಕೆ ಓದಿದೆ ....ಪ್ರಯಾಣ ಮುಂತಾದ ಖರ್ಚಿಗೆ ಪ್ರತ್ಯೇಕ ಚಂದಾ: ಒಂದೂವರೆ ರೂಪಾಯಿ" ಎಂದು ಹಾಕಿದ್ದ, ಹಾಳು ಕಾರ್ಯದರ್ಶಿ!

ತಕಡಿ ಮಾತು

೧೯೪೨ ಮಾರ್ಚಿ ೮ನೆಯ ತಾರೀಖು ಭಾನುವಾರ ಚುಂಗ್‌ಕಿಂಗ್ ನಗರದಲ್ಲಿ ಅಖಿಲ ಜನಾಂಗ ಮಹಿಳಾ ಸಮ್ಮೇಳನ ನಡೆಯಿತು. ಚೀಣಾ ದೇಶದ ವೀರಮಾತೆಯಾದ ಶ್ರೀಮತಿ ಚಿಯಾಂಗ್ ಕೈ ಷಕ್ಕರು ಒಂದು ಸಂದೇಶವನ್ನು ಕಳುಹಿಸಿದ್ದರು. "ಮಾನವನ ಉದ್ಯಮಗಳು ನೆರವೇರಬೇಕಾದರೆ ಆರ್ಥಿಕ ಸಂಪತ್ತಿನಿಂದ ಶೇಕಡ ೩೦ರಷ್ಟು ಮಾತ್ರ ಪ್ರಯೋಜನವುಂಟು; ಪಾರಮಾರ್ಥಿಕ ಸಂಪತ್ತು ಶೇಕಡ ೭೦ರಷ್ಟು ಇದ್ದೇ ಇರಬೇಕು," ಎಂಬುದೇ ಆ ಸಂದೇಶದ ಮುಖ್ಯ ವಾಕ್ಯ.

ಶ್ರೀಮತಿಯವರು ಚೀಣಾದ ೫೦ ಕೋಟಿ ಪ್ರಜೆಗಳ ಪ್ರೀತಿ ವಿಶ್ವಾಸವನ್ನು ಹೇಗೆ ಸಂಪಾದಿಸಿರುವರು ಎಂಬುದು ಈ ವಾಕ್ಯದಿಂದಲೇ ಗೊತ್ತಾಗುತ್ತದೆ. ತಕಡಿಯಲ್ಲಿ ತೂಕ ಮಾಡಿ ಮಾತನಾಡಬೇಕು ಎಂದು ಅನೇಕರು ಹೇಳುತ್ತಾರೆ. ಆದರೆ, ಅಷ್ಟು ಖಚಿತವಾಗಿ ಮಾತುಗಳನ್ನು ಉಪಯೋಗಿಸಲು ಯಾರಿಂದ ಸಾಧ್ಯ? ಇತರ ಶ್ರೀಮತಿಯರು ಇದೇ ವಾಕ್ಯವನ್ನು ಹೇಳುವುದಾದರೆ, "ಮಾನವನ ಉದ್ಯಮಗಳು ನೆರವೇರಬೇಕಾದರೆ ಆರ್ಥಿಕ ಸಂಪತ್ತಿನಿಂದ ಹೆಚ್ಚು ಪ್ರಯೋಜನವಿಲ್ಲ. ಪಾರಮಾರ್ಥಿಕ ಸಂಪತ್ತು ಬಹಳವಾಗಿ ಇದ್ದೇ ಇರಬೇಕು," ಎಂದು ಹೇಳುತ್ತಿದ್ದರು.

"ಹೊಳೆಗೆ ಎಸೆದರೂ ಅಳೆದು ಎಸೆಯಬೇಕು" ಎಂಬ ಅರಬ ಗಾದೆಯನ್ನು ಅನುಸರಿಸುವವರು ಅಪರೂಪ. ಹೆಚ್ಚಾಗಿಲ್ಲ, ತುಂಬಾ ಬೇಕು, ಬಹಳವಾಗಿದೆ, ತುಸು ಕಡಿಮೆ, ಅತಿ ಮಾಡುತ್ತಾನೆ, ಮಿತಿಯಿಲ್ಲ, ಕೊಂಚ ಕೊಂಚ, ಎಂಬ ಸ್ಥೂಲವಾದ ಶಬ್ದಗಳನ್ನೇ ಸಂದರ್ಭಕ್ಕೆ ತಕ್ಕಂತೆ ಉಪಯೋಗಿಸಿಬಿಡುತ್ತಾರೆ. ಇದರಿಂದ ವಿಷಯಗ್ರಹಣಕ್ಕೆ ತುಂಬಾ ತೊಂದರೆ. ಆ ಹುಡುಗಿ ಕೊಂಚ ಕಪ್ಪು ಅಂದರೆ, ಹುಡುಗನಿಗೆ ವಿಷಯ ಗ್ರಹಣವಾಗುತ್ತದೆಯೆ? "ಆ ಹುಡುಗ ಸ್ವಲ್ಪ ಪೆದ್ದು" ಅಂದರೆ, ಹುಡುಗಿಗೆ ಸಮಾಧಾನವಾಗುತ್ತದೆಯೇ? ಆದ್ದರಿಂದ ಹೇಳುವವರ ಅಭಿಪ್ರಾಯ ಕೇಳುವವರಿಗೆ ಸ್ಪಷ್ಟವಾಗಬೇಕಾದರೆ ಚುಂಗ್‌ಕಿಂಗ್ ಸಂದೇಶದಂತೆ ನಾವೂ ಕೂಡ 'ಶೇಕಡ' ರೀತಿಯಲ್ಲಿ ಬರವಣಿಗೆಯನ್ನೂ ಕೂರವಣಿಗೆಯನ್ನೂ (ಅಂದರೆ, ಬರೆಯುವಾಗಲೂ, ಪರರ ಕಿವಿಯನ್ನು ಒರೆದು ಕೂರೆಯುವಾಗಲೂ) ಅಳವಡಿಸಿಕೊಳ್ಳಬೇಕು. ಯಾರಾದರೂ ಎದುರಿಗೆ ಸಿಕ್ಕಿ "ಚನ್ನಾಗಿದ್ದೀರಾ?" ಅಂದರೆ, "ತಕ್ಕಮಟ್ಟಿಗೆ, ೪೫," ಎಂದುತ್ತರ ಕೊಡಬೇಕು. ಆಮೇಲೆ ನಾವು ಅವರನ್ನು ಸಂಬೋಧಿಸಿ "ಏಕೆ ನೀವು ೧೫ಕ್ಕೆ ಇಳಿದುಹೋಗಿದ್ದೀರಲ್ಲಾ,"

ಎಂದು ಪ್ರೀತಿಯಿಂದ ವಿಚಾರಿಸಬೇಕು.

ಕಥೆ ಬರೆಯುವಾಗ, ಕಾದಂಬರಿ ಗೀಚುವಾಗ, ಕವನ ಕಟ್ಟುವಾಗ, ಅಂಕಿಗಳು ಅನುಕೂಲವಾಗಿರುತ್ತವೆ. ಅಲ್ಲದೆ, ಸುಖಸಂತೋಷ ಸೂಚಕವಾಗಿ (+) ಎಂಬ ಗುರುತನ್ನೂ, ವ್ಯಸನ ಸಂಕಟ ಸೂಚಕವಾಗಿ (—) ಎಂಬ ಗುರುತನ್ನೂ ನಮ್ಮ ಸಹಾಯಕ್ಕೆ ತೆಗೆದುಕೊಳ್ಳಬಹುದು. ಉದಾಹರಣೆಗೆ: "ರಾಯರ ಸ್ಥಿತಿ ಕೆಡುತ್ತಾ ಬಂತು" (-೬೦) ಜನಗಳನೆಷ್ಟೋ ಮರೆತುಹೋಯಿತು. (-೭೨) "ಅವರ ಮುಖ ಸುಕ್ಕುಗೊಂಡು ವೇದನೆಯನ್ನು ಸೂಚಿಸುತ್ತಿತ್ತು. (-೮೪), "ಕೊನೆ ಕೊನೆಗೆ ಅವರ ಗಂಟಲೊಳಕ್ಕೆ ಹಾಲು ಕೂಡ ಇಳಿಯುತ್ತಿರಲಿಲ್ಲ. (-೯೩) ಒಂದು ಸಂಜೆ ಅವರು ಆಯಾಸದಿಂದ ನಿಟ್ಟುಸಿರು ಬಿಟ್ಟರು. (-೯೬) ಅರ್ಧ ಗಂಟೆ ಕಳೆಯಿತು. (-೯೮) ಡಾಕ್ಟರು ಬಂದು ನಾಡಿ ಹಿಡಿದರು(-೯೯) ಅಯ್ಯೋ....(-೧೦೦)-

ಹಾಗೆಯೇ ಇನ್ನೊಂದು ಉದಾಹರಣೆ: ಹಿಟ್ಟಿನ ಮುದ್ದೆಯನ್ನು ನುಂಗುತ್ತಾ (+೬೬) ಸಾರೊಳಗಿನ ಕಾಳುಗಳನ್ನು ಸೂರಿನ ಕಡೆ ನೋಡಿಕೊಂಡು ಅಗಿಯುತ್ತಿರುವಾಗ (+ ೮೩) ಮಾದನಿಗೆ ಮಲ್ಲಿಯ ಯೋಚನೆ ಬಂದು (+ ೯೨) ಮದುವೆ ಮಾಡಿಕೊಳ್ಳಬೇಕೆಂದು (+ ೯೯) ನಿರ್ಧರಿಸಿದನು. (+ ೧೦೦).

ಕವಿಗಳು ನಿರಂಕುಶಮತಿಗಳು. ಅವರ ಭಾವನಾಶಕ್ತಿಯನ್ನು ತಕಡಿಯಲ್ಲಿಟ್ಟು ತೂಗಬಾರದು. ನಿಜ. ಆದರೂ ಅತಿಶಯೋಕ್ತಿಗೆ ಅಂಕಿಯ ಮಿತಿಯನ್ನು ಕೊಡುವುದು ಒಳ್ಳೆಯದು. ಉದಾಹರಣೆಗೆ:

ಹೂವಿನ ಸೊಬಗನ್ನು (+೩೬) ನೋಡುತ ನೀನು,
ಕೋಮಲ (+೯೭) ವೆನ್ನುತ ಮುತ್ತಿಡುವೆ.
ಹೂವಿನ ಪೆಂಪಿಗೆ (+೩೯) ಬಾಳನು ಕೊಟ್ಟಾ
ಮೊಳಕೆಯ ಗೋಳನು (-೭೯) ನೀನರಿಯೆ [ಪುಟ್ಟಪ್ಪ[

ಅಥವಾ, ಇನ್ನೊಂದು ಉದಾಹರಣೆಯನ್ನು ನೋಡಿ:

ಹಣ್ಣೊಳು ಸಿಹಿ (+೫೮) ಕಾಯೊಳು ಕಹಿ (-೮೫)
ಮರದ ರಸವದೆಂತು
ಅರೆ (೫೦) ಒಳವಿಯೊಳಾನಂದವೆ (+೬೩)
ನೋವೆನಿಸುವುದಿಂತು (-೬೩) [ಪು. ತಿ. ನರಸಿಂಹಾಚಾರ್]

ಈ ರೀತಿ ನಮ್ಮ ಸಂಭಾಷಣೆಯೂ ಸಾಹಿತ್ಯವೂ ಒಂದು ಸ್ಥಿಮಿತಕ್ಕೆ ಬಂದು ಬರೆಯುವವನ ಅಭಿಪ್ರಾಯವೂ, ಕೊರೆಯುವವನ ಅಭಿಪ್ರಾಯವೂ, ಇತರರ ಕಣ್ಣು ಕಿವಿಗಳಿಗೆ ಖಚಿತವಾಗಿ ತಿಳಿಯುವಂತಾದರೆ ನಮ್ಮ ಬದುಕು ಶೇಕಡ ೭೭ರಷ್ಟು ಉತ್ತಮವಾಗುವುದರಲ್ಲಿ ಶೇಕಡ ೨ ರಷ್ಟೂ ಸಂದೇಹವಿಲ್ಲ.

Printed at : Prajamata Power Press, Bangalore City
and Published by B. N. GUPTA - Editor: Dr. R. SHIVARAM.